ಪಟ್ಟಣ ಸಹಕಾರ



# ಬ್ಯಾಂಕಿಂಗ್ ಪ್ರಪಂಚ

ಪಟ್ಟಣ ಸಹಕಾರ ಬ್ಯಾಂಕುಗಳ ತ್ರೈಮಾಸಿಕ

ಸಂಪುಟ : 13
ಸಂಚಿಕೆ : 2
ಏಪ್ರಿಲ್ / ಮೇ / ಜೂನ್ 2025
ಪುಟಗಳು : 44



## ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಗಳಲ್ಲಿ ಭಾರತವು ಸೇರಿದೆ : ವಿಶ್ವಸಂಸ್ಥೆ ಅರ್ಧವಾರ್ಷಿಕ ವರದಿ



ಎಟಿಎಂನಿಂದ ಆಗುವ 10 ಉಪಯೋಗಗಳು



ಸಂಸ್ಥೆಗಳಲ್ಲಿನ ಹುದ್ದೆಗಳ ಕೆಲಸ ಕೃತಕ ಬುದ್ಧಿಮತ್ತೆ ಹೆಗಲಿಗೆ



ಹಣಕಾಸು ನಿರ್ವಹಣೆ : ಮಹಿಳೆಯರ ಎಚ್ಚರ ಅಗತ್ಯ



ದಿ ಜಮಖಂಡಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ ಲಿ., ಜಮಖಂಡಿ



ರಾಜ್ಯದ ಅತ್ಯುತ್ತಮ ಪಟ್ಟಣ ಸಹಕಾರ ಬ್ಯಾಂಕು ಎಂಬ ಹೆಗ್ಗಳಿಕೆ

ಬೆಂಗಳೂರಿನ ಆನಂದ ಕೋ-ಆಪರೇಟಿವ್ ಬ್ಯಾಂಕ್




ಮಂಗಳೂರು ವಿಶ್ವಕರ್ಮ ಸಹಕಾರ ಬ್ಯಾಂಕಿನ ಸ್ವರ್ಣ ಸಂಭ್ರಮ ಸಮಾರಂಭವನ್ನು ಎಸ್‌ಸಿಡಿಸಿಸಿ ಬ್ಯಾಂಕಿನ ಅಧ್ಯಕ್ಷರಾದ ಸಹಕಾರ ರತ್ನ ಡಾ. ಎಂ.ಎನ್. ರಾಜೇಂದ್ರ ಕುಮಾರ್ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಡಾ. ಎಸ್.ಆರ್. ಹರೀಶ್ ಆಚಾರ್ಯ, ಬ್ಯಾಂಕಿನ ಉಪಾಧ್ಯಕ್ಷರಾದ ಜಗದೀಶ್ ಆಚಾರ್ಯ ಹಾಗೂ ಬ್ಯಾಂಕಿನ ಎಲ್ಲಾ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.




ದಿ ಜಮಖಂಡಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ನೂತನ ಕಟ್ಟಡ ಉದ್ಘಾಟನೆಯನ್ನು ಉಪಮುಖ್ಯಮಂತ್ರಿ ಶ್ರೀ ಡಿ.ಕೆ. ಶಿವಕುಮಾರ್‌ರವರು ಉದ್ಘಾಟಿಸಿದರು. ಈ ಸಮಾರಂಭದಲ್ಲಿ ಜವಳಿ, ಸಕ್ಕರೆ ಕೃಷಿ ಮಾರುಕಟ್ಟೆ ಸಚಿವ ಶ್ರೀ ಶಿವಾನಂದ ಪಾಟೀಲ, ಅಥಣಿ ಶಾಸಕ ಶ್ರೀ ಲಕ್ಷ್ಮಣ ಸವದಿ, ಬೀಳಗಿ ಶಾಸಕ ಹಾಗೂ ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷ ಶ್ರೀ ಜೆ.ಟಿ. ಪಾಟೀಲ, ವಿಧಾನ ಪರಿಷತ್ ಸದಸ್ಯ ಶ್ರೀ ಪಿ.ಎಚ್.ಪೂಜಾರ, ಜಮಖಂಡಿ ಶಾಸಕ ಶ್ರೀ ಜಗದೀಶ ಗುಡಗುಂಟಿ, ಮಾಜಿ ಸಚಿವರಾದ ಶ್ರೀ ಎಸ್.ಆರ್. ಪಾಟೀಲ, ಶ್ರೀ ಮುರುಗೇಶ ನಿರಾಣಿ, ಮಾಜಿ ಶಾಸಕರಾದ ಶ್ರೀ ಆನಂದ ನ್ಯಾಮಗೌಡ, ಶ್ರೀಕಾಂತ ಕುಲಕರ್ಣಿ, ಬ್ಯಾಂಕಿನ ಅಧ್ಯಕ್ಷ ರಾಹುಲ್ ಸೂರ್ಯಕಾಂತ ಕಲೂತಿ ಮತ್ತೀತರರು ಉಪಸ್ಥಿತರಿದ್ದರು.

ಸಂಪಾದಕೀಯ



ಆತ್ಮೀಯ ಸಹಕಾರಿ ಬಂಧುಗಳೇ...

▶▶ ಎಚ್.ಕೆ. ಪಾಟೀಲ

# ದೇಶ ಆರ್ಥಿಕ ಪ್ರಗತಿ ಸಾಧಿಸಬೇಕಿದ್ದರೆ, ಶಾಂತಿ, ನೆಮ್ಮದಿ, ಸೌಹಾರ್ದತೆಯ ವಾತಾವರಣ ಅಗತ್ಯ

> ಕಳೆದವಾರ ರಾಷ್ಟ್ರೀಯ ಸಾಂಖ್ಯಿಕ ಕಚೇರಿ ಬಿಡುಗಡೆಯಾಗಿರುವ 2024–25ನೇ ಆರ್ಥಿಕ ವರ್ಷದ ವರದಿಯ ಪ್ರಕಾರ; ದೇಶದ ಒಟ್ಟು ಆರ್ಥಿಕ ಉತ್ಪನ್ನವು ನಾಲ್ಕು ವರ್ಷದ ಕನಿಷ್ಠ ಮಟ್ಟವಾದ ಶೇ. 6.5ರಷ್ಟು ದಾಖಲಾಗಿದೆ. ಇದಕ್ಕೆ ಕಾರಣ; ತಯಾರಿಕಾ ವಲಯದ ಬೆಳವಣಿಗೆ ಕುಸಿತವಾಗಿರುವುದು ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ ಹೇಳಿರುವುದನ್ನು ಗಮನಿಸಿದರೆ ಮೇಲಿನ ನೀತಿ ಆಯೋಗದ ಮುಖ್ಯಕಾಯಾನಿರ್ವಾಧಿಕಾರಿ ಬಿ.ವಿ.ಆರ್. ಸುಬ್ರಹ್ಮಣ್ಯಂ ಅವರು ಆತುರಪಟ್ಟಿರುವುದು ಎದ್ದು ಕಾಣುತ್ತದೆ.

ಕೇಂದ್ರ ಸರ್ಕಾರ ಈಗಾಗಲೇ ಅನೇಕ ಬಾರಿ ಮುಂದಿನ ದಿನಗಳಲ್ಲಿ ದೇಶದ ಆರ್ಥಿಕತೆಯ 5 ಟ್ರಿಲಿಯನ್ ಡಾಲರ್ ಇರಲಿದೆ ಎಂದೂ ಹೇಳುತ್ತಲೇ ಬಂದಿದೆ. 2030ರಲ್ಲಿ ಭಾರತ ಸೂಪರ್ ಪವರ್ ಆಗಲಿದೆ ಎಂದೂ ಹೇಳುತ್ತಿದೆ. ಇದೀಗ ಜಪಾನ್ ಹಿಂದಿಕ್ಕಿ ಜಗತ್ತಿನ 4ನೇ ಅತಿದೊಡ್ಡ ಆರ್ಥಿಕತೆಯಾಗಿ ನಮ್ಮ ದೇಶ ಹೊರಹೊಮ್ಮಿದೆ ಎಂದು ನೀತಿ ಆಯೋಗದ ಮುಖ್ಯಕಾಯಾನಿರ್ವಾಧಿಕಾರಿ ಬಿ.ವಿ.ಆರ್. ಸುಬ್ರಹ್ಮಣ್ಯಂ ಅವರೇ ಹೇಳಿದ್ದಾರೆ. ಆದರೆ, ಅಂತರ ರಾಷ್ಟ್ರೀಯ ಹಣಕಾಸು ನಿಧಿ ಮಾಹಿತಿ ಪ್ರಕಾರ, ನಾವು ಜಪಾನ್ ಆರ್ಥಿಕತೆಗಿಂತಲೂ ಮುಂದೆ ಸಾಗಿಲ್ಲ. 2026ರ ಅಂತ್ಯದ ವೇಳೆಗೂ ನಮ್ಮ ದೇಶದ ಜಿಡಿಪಿಯ ಗಾತ್ರ ಜಪಾನ್ ದೇಶಕ್ಕಿಂತ ಹಿಂದೆಯೇ ಇರಲಿದೆ ಎಂದು ಅಂದಾಜಿಸಲಾಗಿದೆ. ಆ ವೇಳೆಗೆ ನಮ್ಮ ದೇಶದ ಜಿಡಿಪಿ ಡಾಲರ್ 4.187 ಟ್ರಿಲಿಯನ್‌ಗೆ ತಲುಪುವ ನಿರೀಕ್ಷೆಯಿದೆ ಮತ್ತು ಜಪಾನಿನ ಜಿಡಿಪಿ ಡಾಲರ್4.186 ಟ್ರಿಲಿಯನ್‌ಗಳಿರುತ್ತದೆ. ಅಂದರೆ ನಮ್ಮ ದೇಶದ ಆರ್ಥಿಕತೆ ಜಪಾನ್ ದೇಶಕ್ಕಿಂತ ಸ್ವಲ್ಪ ಮುಂದಿರುವ ಸಾಧ್ಯತೆ ಇದೆ. ಇದೆಲ್ಲ ಅಂತರ ರಾಷ್ಟ್ರೀಯ ಹಣಕಾಸು ನಿಧಿ ಅಂದಾಜಿಸಿರುವ ಮಾಹಿತಿಯಷ್ಟೆ.

ನೋಡಿ, ಕಳೆದವಾರ ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು ಬಿಡುಗಡೆಯಾಗಿರುವ 2024–25ನೇ ಆರ್ಥಿಕ ವರ್ಷದ ವರದಿಯ ಪ್ರಕಾರ; ದೇಶದ ಒಟ್ಟು ಆರ್ಥಿಕ ಉತ್ಪನ್ನವು ನಾಲ್ಕು ವರ್ಷದ ಕನಿಷ್ಠ ಮಟ್ಟವಾದ ಶೇ. 6.5ರಷ್ಟು ದಾಖಲಾಗಿದೆ. ಇದಕ್ಕೆ ಕಾರಣ; ತಯಾರಿಕಾ ವಲಯದ ಬೆಳವಣಿಗೆ ಕುಸಿತವಾಗಿರುವುದು ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ ಹೇಳಿರುವುದನ್ನು ಗಮನಿಸಿದರೆ ಮೇಲಿನ ನೀತಿ ಆಯೋಗದ ಮುಖ್ಯಕಾರ್ಯನಿರ್ವಹಣಾಧಿಕಾರಿ ಬಿ.ವಿ.ಆರ್. ಸುಬ್ರಹ್ಮಣ್ಯಂ ಅವರು ಆತುರಪಟ್ಟಿರುವುದು ಎದ್ದು ಕಾಣುತ್ತದೆ. ಇರಲಿ, ಈ ವಿಚಾರದಲ್ಲಿ ಆರ್ಥಿಕ ತಜ್ಞರ ಅಭಿಪ್ರಾಯ ಬೇರೆಯದೆ ಆದ ರೀತಿಯಲ್ಲಿದೆ. ನಮ್ಮ ದೇಶ 2030ರ ವೇಳೆಗೆ ಜಗತ್ತಿನ ಸೂಪರ್ ಪವರ್ ಆಗಬೇಕಿದ್ದರೆ ದೇಶದ ವಾರ್ಷಿಕ ಅಭಿವೃದ್ಧಿ ದರ ಶೇ.10%ರಷ್ಟು ಇದ್ದಲ್ಲಿ ಮಾತ್ರ ಸಾಧ್ಯ ಎನ್ನುವುದು. ಆದರೆ, ಕಳೆದ ಎರಡು ದಶಕಗಳಲ್ಲಿ ಆರ್ಥಿಕ ಪ್ರಗತಿ ಸ್ವಲ್ಪ ಮಂದಗತಿಯಲ್ಲಿರುವುದು ಕಂಡು ಬರುವ ಅಂಶವಾಗಿದೆ. ಅಲ್ಲದೆ, ದೇಶದ ವಾರ್ಷಿಕ ತಲಾ ಆದಾಯ ಕೋವಿಡ್ ಪೂರ್ವ ಮಟ್ಟಕ್ಕಿಂತ ಕೆಳಗಿಳಿದಿದೆ ಎಂದು ವರದಿಗಳೇ ಹೇಳುತ್ತಿವೆ. ಜಾಗತಿಕ ಮಟ್ಟದಲ್ಲಿ ಡಾಲರ್ ಎದುರು ಭಾರತದ ರೂಪಾಯಿ ಭಾರಿ ಪ್ರಮಾಣದ ಕುಸಿತ ಕಂಡು ಬಂದಿರುತ್ತಿದೆ. ಪ್ರಸ್ತುತ ಒಂದು ಡಾಲರಿಗೆ ನಾವು ಬರೋಬ್ಬರಿ 84ರೂಪಾಯಿ ಹೆಚ್ಚು ತೆರಬೇಕಿದೆ.

ಮೊದಲನೆಯದಾಗಿ ಆರ್ಥಿಕತೆ ಚೇತರಿಸಿಕೊಳ್ಳಬೇಕಿದ್ದರೆ, ಉದ್ಯಮಗಳು, ವಾಣಿಜ್ಯ ವ್ಯವಹಾರಗಳು ಅಡೆತಡೆ ಇಲ್ಲದೆ ನಡೆಯಬೇಕಿದೆ. ದೇಶದಲ್ಲಿ ಶಾಂತಿ, ಸೌಹಾರ್ದತೆಯ, ನೆಮ್ಮದಿಯ ವಾತಾವರಣವಿರಬೇಕಿದೆ. ಭಯಭೀತಿಯ ವಾತಾವರಣದಲ್ಲಿ ಏನನ್ನೂ ಬೆಳೆಸಲು ಸಾಧ್ಯವಿಲ್ಲ; ಬದಲಿಗೆ ನಂಬಿಕೆ, ವಿಶ್ವಾಸ, ಮುಕ್ತ ಹಾಗೂ ಸ್ನೇಹ ಪೂರ್ಣ ವಾತಾವರಣ ಇದ್ದಲ್ಲಿ ಆರ್ಥಿಕ ಪ್ರಗತಿ ಸಾಧ್ಯ ಎಂದು ಹೇಳ ಬಯಸುತ್ತೇನೆ.

## ಒಳಪುಟಗಳಲ್ಲಿ...


ಅಮೆರಿಕ ಅಧ್ಯಕ್ಷರ ಒನ್ ಬಿಗ್ ಬ್ಯೂಟಿಫುಲ್ ಬಿಲ್ : ಹಣ ರವಾನೆ ಮೇಲೆ ಶೇ.5ರಷ್ಟು ತೆರಿಗೆ; ಭಾರತಕ್ಕೆ 1.65 ಬಿಲಿಯನ್ ಡಾಲರ್ ನಷ್ಟ ! ................5

ಉದ್ಯೋಗಾವಕಾಶ ಸೃಷ್ಟಿಸದೆ ದೇಶ ಆರ್ಥಿಕವಾಗಿ ಬೆಳೆಯಲು ಸಾಧ್ಯವಿಲ್ಲ : ರಘುರಾಮ್ ರಾಜನ್ ................ 6

ಕೋಮಾದಲ್ಲಿರುವ ವೈದ್ಯನ ಹಣವನ್ನು ಡ್ರಾ ಮಾಡಿಕೊಳ್ಳಲು ಪತ್ನಿಯ ಮನವಿಗೆ ಹೈಕೋರ್ಟ್ ಅನುಮತಿ ................ 7

ಭಾರತದಲ್ಲಿ ನಿರುದ್ಯೋಗದ ಪ್ರಮಾಣ ಅತ್ಯಧಿಕವಾಗಿದೆ : ಅಂತರ ರಾಷ್ಟ್ರೀಯ ಕಾರ್ಮಿಕ ಸಂಘಟನೆ ................ 8

ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಗಳಲ್ಲಿ ಭಾರತವು ಸೇರಿದೆ : ವಿಶ್ವಸಂಸ್ಥೆ ಅರ್ಧವಾರ್ಷಿಕ ವರದಿ ................ 9

ಎಟಿಎಂನಿಂದ ಆಗುವ 10 ಉಪಯೋಗಗಳು ................ 11

ಸಂಸ್ಥೆಗಳಲ್ಲಿನ ಹುದ್ದೆಗಳ ಕೆಲಸ ಕೃತಕ ಬುದ್ಧಿಮತ್ತೆ (Ai) ಹೆಗಲಿಗೆ ............13

ಮುಂದಿನ ದಶಕಗಳು ಏಷ್ಯಾಕ್ಕೆ ಸೇರಿದ್ದು; ಹೆಜ್ಜೆಯಿಡುವ ಮುನ್ನ ಎಚ್ಚರವಾಗಿರಬೇಕಿದೆ ಭಾರತ ................ 17

ಹಣಕಾಸು ನಿರ್ವಹಣೆ : ಮಹಿಳೆಯರ ಎಚ್ಚರ ಅಗತ್ಯ ............................21

ತಂತ್ರಜ್ಞಾನ ಆಧಾರಿತ ಸೇವೆ, ಸದಸ್ಯರಿಗೆ ನೆರವು : ನಾಲ್ಕು ದಶಕಗಳ ಸಂತೃಪ್ತ ಸೇವೆಯಲ್ಲಿ ಬೆಂಗಳೂರಿನ ಆನಂದ ಕೋ-ಆಪರೇಟಿವ್ ಬ್ಯಾಂಕ್ .......... 23

ದಿ ಜಮಖಂಡಿ ಅರ್ಬನ್ ಕೋ-ಆಪರೇಟಿವ್ಹ್ ಬ್ಯಾಂಕ ಲಿ., ಜಮಖಂಡಿ...25

Knowledge for Professionalism in Cooperative Banking.................28

ಸಹಕಾರದ ಬಗ್ಗೆ ಗಣ್ಯರ ಅನಿಸಿಕೆ.........................................................37



ಪಟ್ಟಣ ಸಹಕಾರ
ಬ್ಯಾಂಕಿಂಗ್ ಪ್ರಪಂಚ

ಸಂಪುಟ : 13 ಸಂಚಿಕೆ : 2

**ಪಟ್ಟಣ ಸಹಕಾರ ಬ್ಯಾಂಕುಗಳ ತ್ರೈಮಾಸಿಕ ಪತ್ರಿಕೆ**

ಏಪ್ರಿಲ್ / ಮೇ / ಜೂನ್ 2025

**ಶ್ರೀ ಎಚ್.ಕೆ. ಪಾಟೀಲ**
ಗೌರವಾಧ್ಯಕ್ಷರು

**ಶ್ರೀ ಬಿ.ಎಸ್. ಪರಮಶಿವಯ್ಯ**
ಉಪಾಧ್ಯಕ್ಷರು

**ಶ್ರೀ ಪುಂಡಲೀಕ ಎನ್. ಕೇರೂರೆ**
ಮುಖ್ಯ ಕಾರ್ಯನಿರ್ವಹಣಾಧಿಕಾರಿ/
ಸಂಪಾದಕರು

**ಸಂಚಿಕೆ ನಿರ್ವಹಣೆ / ವಿನ್ಯಾಸ** :
ವರ್ಣ ಕಮ್ಯೂನಿಕೇಷನ್

**ಪ್ರಕಟಣೆ** :
**ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ.,**
ನಂ. 132, ಕೆ.ಎಚ್. ರಸ್ತೆ, ಬೆಂಗಳೂರು - 27

**ದೂರವಾಣಿ** :
080-22233662, 080-22279574

**ಇ-ಮೇಲ್** :
editorkubf@gmail.com

**ಅಂತರ್ಜಾಲ** : www.kubfed.com

**ಮುದ್ರಣ** : ನವರತ್ನ ಪ್ರಿಂಟರ್ಸ್, ಬೆಂಗಳೂರು.

## ಅಮೆರಿಕ ಅಧ್ಯಕ್ಷರ ಒನ್ ಬಿಗ್ ಬ್ಯೂಟಿಫುಲ್ ಬಿಲ್ :

# ಹಣ ರವಾನೆ ಮೇಲೆ ಶೇ.5ರಷ್ಟು ತೆರಿಗೆ; ಭಾರತಕ್ಕೆ 1.65 ಬಿಲಿಯನ್ ಡಾಲರ್ ನಷ್ಟ !

**ಬೆಂಗಳೂರು:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ 'ಒನ್ ಬಿಗ್ ಬ್ಯೂಟಿಫುಲ್ ಬಿಲ್'ನಲ್ಲಿ ವಿದೇಶಿ ಹಣ ರವಾನೆಯ ಮೇಲೆ ಶೇ.5ರಷ್ಟು ತೆರಿಗೆ ವಿಧಿಸುವ ಪ್ರಸ್ತಾಪ ಮಾಡಿದ್ದು, ಇದು ಭಾರತದ ಮೇಲೆ ಗಮನಾರ್ಹ ಪರಿಣಾಮ ಬೀರಬಹುದು ಎಂದು ತೆರಿಗೆ ತಜ್ಞರು ಹೇಳಿದ್ದಾರೆ. ಏಕೆಂದರೆ ಭಾರತ ಅಮೆರಿಕದಿಂದ ಬರುವ ಹಣದ ಅತಿದೊಡ್ಡ ಫಲಾನುಭವಿಗಳಲ್ಲಿ ಒಂದಾಗಿದೆ.

ಭಾರತಕ್ಕೆ ಹಣ ಕಳುಹಿಸುವ ವಲಸೆ ರಹಿತ ವೀಸಾ ಹೊಂದಿರುವವರು (H-1B ವೀಸಾಗಳಂತೆ) ಸೇರಿದಂತೆ ನಾಗರಿಕರಲ್ಲದವರು ಮಾಡುವ ಅಂತರರಾಷ್ಟ್ರೀಯ ಹಣ ವರ್ಗಾವಣೆಯ ಮೇಲೆ ಶೇ.5 ರಷ್ಟು ತೆರಿಗೆ ವಿಧಿಸಲು ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ.

ಭಾರತೀಯ ರಿಸರ್ವ್ ಬ್ಯಾಂಕ್ ಪ್ರಕಾರ, ವಿದೇಶಗಳಿಂದ ಭಾರತಕ್ಕೆ ಒಳಬರುವ ಒಟ್ಟು ಹಣ ರವಾನೆಯಲ್ಲಿ ಅಮೆರಿಕದಿಂದ ಬರುವ ಹಣವು 2023–24ರಲ್ಲಿ ಶೇ.27.7 ರಷ್ಟು ಇದ್ದು, ಇದು ಅತಿ ದೊಡ್ಡ ಹಣ ರವಾನೆಯಾಗಿದೆ. ಇದು 2020–21ರಲ್ಲಿ ಶೇ.23.4 ರಷ್ಟಿತ್ತು.

ಅಮೆರಿಕದಲ್ಲಿ ಸುಮಾರು ಶೇ.78 ರಷ್ಟು




ಭಾರತೀಯ ವಲಸಿಗರು ನಿರ್ವಹಣೆ, ವ್ಯವಹಾರ ಮತ್ತು ವಿಜ್ಞಾನದಂತಹ ಹೆಚ್ಚಿನ ಆದಾಯ ಗಳಿಸುವ ಕ್ಷೇತ್ರಗಳಲ್ಲಿ ಉದ್ಯೋಗದಲ್ಲಿದ್ದಾರೆ. ಆರ್‌ಬಿಐ ದತ್ತಾಂಶದ ಪ್ರಕಾರ, ಭಾರತದ ಹಣ ರವಾನೆ 2010–11ರಲ್ಲಿ 55.6 ಬಿಲಿಯನ್ ಡಾಲರ್ ನಿಂದ 2023–24ರಲ್ಲಿ 118.7 ಬಿಲಿಯನ್ ಡಾಲರ್‌ಗೆ ದ್ವಿಗುಣಗೊಂಡಿದೆ. ಅಂದರೆ ಸುಮಾರು 33 ಬಿಲಿಯನ್ ಡಾಲರ್ ಅಮೆರಿಕದಿಂದ ಬಂದಿದೆ. ಈ ಮಸೂದೆ ಜಾರಿಗೆ ಬಂದರೆ, ಭಾರತ 1.65 ಬಿಲಿಯನ್ ಡಾಲರ್ ಹಣ ರವಾನೆಯನ್ನು ತ್ಯಜಿಸಬೇಕಾಗಬಹುದು ಎಂದು ತಜ್ಞರು ಎಚ್ಚರಿಸಿದ್ದಾರೆ.

ಸ್ಟ್ಯಾಟಿಸ್ಟಿಕ್ ಪ್ರಕಾರ, 54 ಲಕ್ಷಕ್ಕೂ ಹೆಚ್ಚು ಭಾರತೀಯರು ಅಮೆರಿಕದಲ್ಲಿ ವಾಸಿಸುತ್ತಿದ್ದಾರೆ. ಅದರಲ್ಲಿ 33 ಲಕ್ಷಕ್ಕೂ ಹೆಚ್ಚು ಜನ ಭಾರತೀಯ ಮೂಲದ ವ್ಯಕ್ತಿಗಳು (PIO) ವರ್ಗದಲ್ಲಿದ್ದಾರೆ. ಅಮೆರಿಕ ನಾಗರಿಕರಲ್ಲದ NRI ಗಳು ತಮ್ಮ ತಾಯ್ನಾಡಿಗೆ ಹಣ ಕಳುಹಿಸುವಾಗ ಶೇ.5 ರಷ್ಟು ವಿದೇಶಿ ರವಾನೆ ತೆರಿಗೆಯನ್ನು ಪಾವತಿಸಬೇಕಾಗುತ್ತದೆ ಎಂದು SW ಇಂಡಿಯಾದ ಅಂತರರಾಷ್ಟ್ರೀಯ ತೆರಿಗೆ ಮತ್ತು ವರ್ಗಾವಣೆ ಬೆಲೆ ನಿಗದಿ ಸಂಸ್ಥೆಯ ಸೌರವ್ ಸೂದ್ ಹೇಳಿದ್ದಾರೆ.

# ಉದ್ಯೋಗಾವಕಾಶ ಸೃಷ್ಟಿಸದೆ ದೇಶ ಆರ್ಥಿಕವಾಗಿ ಬೆಳೆಯಲು ಸಾಧ್ಯವಿಲ್ಲ : ರಘುರಾಮ್ ರಾಜನ್

**ಜನಸಂಖ್ಯೆಯ ಒಂದು ಪ್ರಮುಖ ಭಾಗವನ್ನು ನಿರ್ಲಕ್ಷಿಸದೇ, ಅದರ ಸಮಸ್ಯೆಯನ್ನು ಆಲಿಸಿ ಪರಿಹಾರ ನೀಡುವ ಅವಶ್ಯಕತೆ ಇದೆ. ಬಹು ಜನರನ್ನು ದ್ವಿತೀಯ ದರ್ಜೆ ನಾಗರಿಕರನ್ನಾಗಿ ಕಾಣುವ ಯಾವ ದೇಶವೂ ಯಶಸ್ಸು ಪಡೆದಿಲ್ಲ ಎಂದು ಮಾಜಿ ಆರ್‌ಬಿಐ ಗವರ್ನರ್ ಅಭಿಪ್ರಾಯಪಟ್ಟಿದ್ದಾರೆ. 'ಪರಿಸ್ಥಿತಿ ಉತ್ತಮಗೊಳ್ಳುತ್ತಿದೆ, ಪ್ರಗತಿ ಹೊಂದುತ್ತಿದ್ದೇವೆ ಎಂದು ಅವರಿಗೆ ಅನಿಸಬೇಕು. ಸ್ವಾತಂತ್ರ್ಯ ಬಂದಾಗಿನಿಂದ ಭಾರತದಲ್ಲಿ ಇರುವ ಸಮಾನತೆಯ ವಾತಾವರಣವನ್ನು ನೀವು ನಿಲ್ಲಿಸಲು ಆಗುವುದಿಲ್ಲ,' ರಾಜನ್ ಅವರು ಕೇಂದ್ರ ಸರ್ಕಾರಕ್ಕೆ ತಿಳಿಹೇಳಿದ್ದಾರೆ.**

**ನವದೆಹಲಿ :** ಜನಸಂಖ್ಯಾ ಬಲದಿಂದ ಭಾರತದ ಆರ್ಥಿಕತೆ ಬೆಳೆಯುತ್ತಿದೆ. ಸ್ಥಗಿತ ಸ್ಥಿತಿಯಲ್ಲಿರುವ ಜಪಾನ್, ಜರ್ಮನಿಯನ್ನು ಹಿಂದಿಕ್ಕಿ ಭಾರತ ಮೂರನೇ ಅತಿದೊಡ್ಡ ಆರ್ಥಿಕ ದೇಶವಾಗಬಹುದು. ಆದರೆ, ಭಾರತ ಶ್ರೀಮಂತ ದೇಶವಾಗುತ್ತಿದೆಯಾ ಎಂದು ಮಾಜಿ ಆರ್‌ಬಿಐ ಗವರ್ನರ್ ರಘುರಾಮ್ ರಾಜನ್ ಪ್ರಶ್ನೆ ಮಾಡಿದ್ದಾರೆ. ಭಾರತಕ್ಕೆ ಈಗ ಜನಸಂಖ್ಯಾ ಬಲ ಸಿಕ್ಕಿದೆ, ಆದರೆ, ಉದ್ಯೋಗಾವಕಾಶ ಸೃಷ್ಟಿಸದೆ ದೇಶ ಆರ್ಥಿಕವಾಗಿ ಬೆಳೆಯಲು ಸಾಧ್ಯವಿಲ್ಲ. 2047–2050ರಲ್ಲಿ ಭಾರತದ ಹೆಚ್ಚಿನ ಜನಸಂಖ್ಯೆಗೆ ವಯಸ್ಸಾಗಿರುತ್ತದೆ. ಅಷ್ಟರೊಳಗೆ ಭಾರತ ಶ್ರೀಮಂತ ದೇಶವಾಗುತ್ತದೆಯೇ ಎಂದು ಅವರು ಪ್ರಶ್ನಿಸಿದ್ದಾರೆ.

**ಶ್ರೀಮಂತ ದೇಶವಾಗಲು ಏನು ಮಾಡಬೇಕು? :** ಶೇ.6 ರಿಂದ 6.5ರ ದರದಲ್ಲಿ ಬೆಳೆದರೆ ಶ್ರೀಮಂತವಾಗಲು ಸಾಧ್ಯವಿಲ್ಲ. ಯುವ ಜನರಿಗೆ ಹೆಚ್ಚು ಉದ್ಯೋಗಾವಕಾಶ ಸೃಷ್ಟಿಸಿದರೆ ಆರ್ಥಿಕತೆಯ ಲಾಭವನ್ನು ಪಡೆಯಲು ಸಾಧ್ಯ. ಹೆಚ್ಚು ವೇಗದಲ್ಲಿ ಆರ್ಥಿಕತೆ ಬೆಳೆಯಲು ಸಾಧ್ಯ. ಇದರಿಂದ ದೇಶ ಶ್ರೀಮಂತವಾಗಬಹುದು ಎಂದು ರಘುರಾಮ್ ರಾಜನ್ ಹೇಳಿದ್ದಾರೆ.

**ಜನಸಂಖ್ಯೆಯ ಒಂದು ಪ್ರಮುಖ ಭಾಗವನ್ನು ನಿರ್ಲಕ್ಷಿಸಬಾರದು :** ಜನಸಂಖ್ಯೆಯ ಒಂದು ಪ್ರಮುಖ ಭಾಗವನ್ನು ನಿರ್ಲಕ್ಷಿಸದೇ,



ಅದರ ಸಮಸ್ಯೆಯನ್ನು ಆಲಿಸಿ ಪರಿಹಾರ ನೀಡುವ ಅವಶ್ಯಕತೆ ಇದೆ. ಬಹು ಜನರನ್ನು ದ್ವಿತೀಯ ದರ್ಜೆ ನಾಗರಿಕರನ್ನಾಗಿ ಕಾಣುವ ಯಾವ ದೇಶವೂ ಯಶಸ್ಸು ಪಡೆದಿಲ್ಲ ಎಂದು ಮಾಜಿ ಆರ್‌ಬಿಐ ಗವರ್ನರ್ ಅಭಿಪ್ರಾಯಪಟ್ಟಿದ್ದಾರೆ. 'ಪರಿಸ್ಥಿತಿ ಉತ್ತಮಗೊಳ್ಳುತ್ತಿದೆ, ಪ್ರಗತಿ ಹೊಂದುತ್ತಿದ್ದೇವೆ ಎಂದು ಅವರಿಗೆ ಅನಿಸಬೇಕು. ಸ್ವಾತಂತ್ರ್ಯ ಬಂದಾಗಿನಿಂದ ಭಾರತದಲ್ಲಿ ಇರುವ ಸಮಾನತೆಯ ವಾತಾವರಣವನ್ನು ನೀವು ನಿಲ್ಲಿಸಲು ಆಗುವುದಿಲ್ಲ,' ಎಂದು ರಾಜನ್ ಅವರು ಕೇಂದ್ರ ಸರ್ಕಾರಕ್ಕೆ ತಿಳಿಹೇಳಿದ್ದಾರೆ.

# ಕೋಮಾದಲ್ಲಿರುವ ವೈದ್ಯನ ಹಣವನ್ನು ಡ್ರಾ ಮಾಡಿಕೊಳ್ಳಲು ಪತ್ನಿಯ ಮನವಿಗೆ ಹೈಕೋರ್ಟ್ ಅನುಮತಿ





**ಬೆಂಗಳೂರು :** ಅಪರೂಪದ ನರರೋಗ ಎನಿಸಿರುವ ಗುಯಿಲಿನ್ ಬಾರ್ ಸಿಂಡೋಮ್‌ಗೆ (ಜಿಬಿಎಸ್) ಒಳಗಾಗಿ ಕೋಮಾ ಸ್ಥಿತಿಯಲ್ಲಿರುವ ವೈದ್ಯರೊಬ್ಬರು ಮೂರು ಬ್ಯಾಂಕ್‌ಗಳಲ್ಲಿ ಹೊಂದಿರುವ ಖಾತೆಗಳ ಹಣವನ್ನು ಡ್ರಾ ಮಾಡಿಕೊಳ್ಳಲು ಅವರ ಪತ್ನಿಗೆ ಅನುಮತಿ ನೀಡಿ ಹೈಕೋರ್ಟ್ ಆದೇಶಿಸಿದೆ. ಈ ಸಂಬಂಧ ರಾಜಾಜಿನಗರದಲ್ಲಿರುವ ಡಾ. ಎಚ್.ವಿ.ಅನಿಲ್ ಕುಮಾರ್ ಅವರ ಪತ್ನಿ, ಸಂಧ್ಯಾ ಅನಿಲ್ ಕುಮಾರ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಪುರಸ್ಕರಿಸಿರುವ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ಸಂಧ್ಯಾ ಅವರನ್ನು ಅನಿಲ್ ಕುಮಾರ್ ಅವರ ಕಾನೂನು ಬದ್ಧ ಪಾಲಕಿಯಾಗಿ ನೇಮಿಸಿ ಆದೇಶಿಸಿದೆ.



ಅಂತೆಯೇ, ಅನಿಲ್ ಕುಮಾರ್ ಅವರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಶಿವಮೊಗ್ಗ ಮತ್ತು ಬೆಂಗಳೂರು ಶಾಖೆಗಳಲ್ಲಿ ಹಾಗೂ ಬೆಂಗಳೂರಿನ ಮಹಾಲಕ್ಷ್ಮಿ ಪುರಂ ಶಾಖೆಯ ಇಂಡಿಯನ್ ಓವರ್‌ಸೀಸ್ ಬ್ಯಾಂಕಿನಲ್ಲಿ ಹೊಂದಿರುವ ಬ್ಯಾಂಕ್ ಖಾತೆಗಳಿಂದ ಹಣ ಡ್ರಾ ಮಾಡಿಕೊಳ್ಳಲು ಸಂಧ್ಯಾ ಅವರಿಗೆ ಅನುಮತಿ ನೀಡಬೇಕು. ಈ ವಿಚಾರದಲ್ಲಿ ಯಾವುದೇ ಕಾರಣಕ್ಕೂ ವಿಳಂಬ ಮಾಡಕೂಡದು ಎಂದು ಬ್ಯಾಂಕುಗಳಿಗೆ ತಾಕೀತು ಮಾಡಿದೆ.

**ಪ್ರಕರಣವೇನು?:** ಡಾ. ಎಚ್.ವಿ. ಅನಿಲ್ ಕುಮಾರ್ 2024ರ ನವೆಂಬರ್ 12ರಂದು ಸೇವೆಯಿಂದ ನಿವೃತ್ತಿ ಹೊಂದುವ ಕೆಲವೇ ತಿಂಗಳ ಮೊದಲು ಅನಾರೋಗ್ಯಕ್ಕೆ ಒಳಗಾದರು. ಅವರು ಗುಯಿಲಿನ್ ಬಾರ್ ಸಿಂಡೋಮ್ ಎಂಬ ಅಪರೂಪದ ನರರೋಗದಿಂದ ಬಳಲುತ್ತಿದ್ದಾರೆ ಎಂದು ಬೆಂಗಳೂರು ವೈದ್ಯಕೀಯ ಮತ್ತು ಸಂಶೋಧನಾ ಸಂಸ್ಥೆಯ ನರವಿಜ್ಞಾನ ವಿಭಾಗದ ವೈದ್ಯರು ಪ್ರಮಾಣೀಕರಿಸಿದ್ದು ಅವರು ಕೃತಕ ಉಸಿರಾಟ ವ್ಯವಸ್ಥೆಯಲ್ಲಿರಬೇಕು ಎಂದು 2024ರ ನವೆಂಬರ್ 29ರಂದು ಸೂಚಿಸಿದ್ದಾರೆ.

ಹೀಗಾಗಿ, ಅವರಿಗೆ 2024ರ ಜೂನ್ 23 ರಿಂದ ಐಸಿಯುನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಅರ್ಜಿದಾರರು ವಿವರಿಸಿದ್ದರು.

# ಭಾರತದಲ್ಲಿ ನಿರುದ್ಯೋಗದ ಪ್ರಮಾಣ ಅತ್ಯಧಿಕವಾಗಿದೆ : ಅಂತರ ರಾಷ್ಟ್ರೀಯ ಕಾರ್ಮಿಕ ಸಂಘಟನೆ




**ಹೊಸದಿಲ್ಲಿ :** ಭಾರತದಲ್ಲಿ ನಿರುದ್ಯೋಗದ ಪ್ರಮಾಣ ಅತ್ಯಧಿಕವಾಗಿದೆ ಎಂದು ಅಂತರ ರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಮಾಹಿತಿ ನೀಡಿದೆ. ಭಾರತದಲ್ಲಿ ಯುವಕರಿಗೆ ಉದ್ಯೋಗಾವಕಾಶ ಕಡಿಮೆಯಾಗಿದೆ ಎಂದು ವರದಿ ನೀಡಿದ್ದ ಅಂತರ ರಾಷ್ಟ್ರೀಯ ಕಾರ್ಮಿಕ ಸಂಘಟನೆ, ದೇಶದ ಶೇ.83ರಷ್ಟು ಯುವ ಸಮೂಹಕ್ಕೆ ಸೂಕ್ತ ಉದ್ಯೋಗ ಸಿಗುತ್ತಿಲ್ಲ ಎಂದು ಹೇಳಿದೆ.

ದೇಶದ ಒಟ್ಟು ನಿರುದ್ಯೋಗಿಗಳ ಪೈಕಿ ಕೆಲಸವಿಲ್ಲದೆ ಕುಳಿತಿರುವ ಶಿಕ್ಷಿತ ಯುವಕರ ಪ್ರಮಾಣ ಶೇ.54.2 ರಿಂದ ಶೇ.65.7ಕ್ಕೆ ಏರಿಕೆ ಆಗಿದೆ ಎಂದು ಸಂಘಟನೆ ತನ್ನ ಅಂಕಿ ಅಂಶದಲ್ಲಿ ಹೇಳಿದೆ. ಈ ವರದಿಯ ಅಂಕಿ ಅಂಶಗಳನ್ನು ಅವಲೋಕನ ಮಾಡಿದರೆ, ಭಾರತದಲ್ಲಿ ನಿರುದ್ಯೋಗ ಪ್ರಮಾಣ ಆತಂಕಕಾರಿ ಪ್ರಮಾಣದಲ್ಲಿ ಏರಿಕೆ ಆಗುತ್ತಿದೆ. ಅದರಲ್ಲೂ ಉದ್ಯೋಗ ರಹಿತ ಯುವಕರ ಪ್ರಮಾಣವೇ ಹೆಚ್ಚಾಗಿದೆ. ನಗರ ಪ್ರದೇಶದ ಬಹುಪಾಲು ಶಿಕ್ಷಿತ ಯುವಕರೇ ನಿರುದ್ಯೋಗಿಗಳಾಗಿದ್ದಾರೆ ಎಂದು ವರದಿ ಹೇಳಿದೆ.

ಆದರೆ, ಖಾಸಗಿ ವಾಹಿನಿಯೊಂದರ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅನುರಾಗ್ ಠಾಕೂರ್, ರೂ. 34 ಕೋಟಿ ಮುದ್ರಾ ಸಾಲ ನೀಡಿಕೆ ಮಾಡಲಾಗಿದೆ. ಈ ಸಾಲ ಯೋಜನೆಯಿಂದಲೂ ಉದ್ಯೋಗಾವಕಾಶ ಸೃಷ್ಟಿಯಾಗಿದೆ. ಈ ಯೋಜನೆಯಡಿ ಸಾಲ ಪಡೆದವರು ಬೇರೆಯವರಿಗೂ ಉದ್ಯೋಗ ನೀಡುತ್ತಿದ್ದಾರೆ ಎಂದು ಅನುರಾಗ್ ಠಾಕೂರ್ ಹೇಳಿದರು.

ಭಾರತದಲ್ಲಿ ಯುವಕರಿಗೆ ಉದ್ಯೋಗಾವಕಾಶ ಕುಸಿಯುತ್ತಿದೆ ಎಂದು ಹೇಳಿದ್ದ ಅಂತರ ರಾಷ್ಟ್ರೀಯ ಕಾರ್ಮಿಕ ಸಂಘಟನೆ, ಭಾರತದಲ್ಲಿ ಯುವಕರಿಗೆ ಉದ್ಯೋಗಕಾವಕಾಶ ಕಲ್ಪಿಸಲು ಐದು ಅಂಶಗಳ ನೀತಿಯನ್ನೂ ಪ್ರಕಟ ಮಾಡಿತ್ತು. ಆದರೆ, ಸಂಘಟನೆಯ ವರದಿಗೆ ಕೇಂದ್ರ ಸರ್ಕಾರ ಆಕ್ಷೇಪ ವ್ಯಕ್ತಪಡಿಸಿದೆ.



# ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಗಳಲ್ಲಿ ಭಾರತವು ಸೇರಿದೆ : ವಿಶ್ವಸಂಸ್ಥೆ ಅರ್ಧವಾರ್ಷಿಕ ವರದಿ




2025ರ ಆರ್ಥಿಕ ಬೆಳವಣಿಗೆಯ ಮುನ್ಸೂಚನೆಯನ್ನು ಶೇಕಡಾ 6.3ಕ್ಕೆ ಇಳಿಸಲಾಗಿದ್ದು, ಅಂದಾಜು ಮಂದಗತಿಯ ಹೊರತಾಗಿಯೂ, ದೇಶವು ವೇಗವಾಗಿ ಬೆಳೆಯುತ್ತಿರುವ ದೊಡ್ಡ ಆರ್ಥಿಕತೆಗಳಲ್ಲಿ ಒಂದಾಗಿ ಉಳಿದಿದೆ, ಇದಕ್ಕೆ ಸ್ಥಿತಿಸ್ಥಾಪಕ ಬಳಕೆ ಮತ್ತು ಸರ್ಕಾರಿ ವೆಚ್ಚಗಳು ಬೆಂಬಲ ನೀಡುತ್ತವೆ ಎಂದು ವಿಶ್ವಸಂಸ್ಥೆ ಅರ್ಧವಾರ್ಷಿಕ ವರದಿ ಹೇಳಿದೆ. ವಿಶ್ವಸಂಸ್ಥೆ 2025ರ ಮಧ್ಯಭಾಗದಲ್ಲಿ ವಿಶ್ವ ಆರ್ಥಿಕ ಪರಿಸ್ಥಿತಿ ಮತ್ತು ನಿರೀಕ್ಷೆಗಳು ಎಂಬ ಶೀರ್ಷಿಕೆಯ ವರದಿಯನ್ನು ಬಿಡುಗಡೆ ಮಾಡಿದರಲ್ಲಿ ಬೆಳವಣಿಗೆಯ ಮುನ್ಸೂಚನೆಗಳನ್ನು ಶೇಕಡಾ 6.3ಕ್ಕೆ ಇಳಿಸಲಾಗಿದ್ದರೂ, ಬಲವಾದ ಖಾಸಗಿ ಬಳಕೆ ಮತ್ತು ಸಾರ್ವಜನಿಕ ಹೂಡಿಕೆಯಿಂದ ನಡೆಸಲ್ಪಡುವ ಭಾರತವು ವೇಗವಾಗಿ ಬೆಳೆಯುತ್ತಿರುವ ದೊಡ್ಡ ಆರ್ಥಿಕತೆಗಳಲ್ಲಿ ಒಂದಾಗಿದೆ ಎಂದು ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ವ್ಯವಹಾರಗಳ ಇಲಾಖೆಯ ಆರ್ಥಿಕ ವಿಶ್ಲೇಷಣೆ, ನೀತಿ ವಿಭಾಗದ ಜಾಗತಿಕ ಆರ್ಥಿಕ ಮಾನಿಟರಿಂಗ್ ಶಾಖೆಯ ಹಿರಿಯ ಆರ್ಥಿಕ ವ್ಯವಹಾರಗಳ ಅಧಿಕಾರಿ ಇಂಗೊ ಪಿಟ್ಟರ್ಲೆ ಹೇಳಿದರು.

ಜಾಗತಿಕ ಆರ್ಥಿಕತೆಯು ಅನಿಶ್ಚಿತ ಹಂತದಲ್ಲಿದೆ, ಇದು ಹೆಚ್ಚಿದ ವ್ಯಾಪಾರ ಉದ್ವಿಗ್ನತೆ ಮತ್ತು ಹೆಚ್ಚಿದ ನೀತಿ ಅನಿಶ್ಚಿತತೆಯಿಂದ ಗುರುತಿಸಲ್ಪಟ್ಟಿದೆ ಎಂದು ವರದಿ ಹೇಳಿದೆ. ಇತ್ತೀಚಿನ ಸುಂಕಗಳ ಏರಿಕೆ, ಪರಿಣಾಮಕಾರಿ ಯುಎಸ್ ಸುಂಕ ದರವನ್ನು ತೀವ್ರವಾಗಿ ಹೆಚ್ಚಿಸಿರುವುದು – ಉತ್ಪಾದನಾ ವೆಚ್ಚವನ್ನು ಹೆಚ್ಚಿಸಲು, ಜಾಗತಿಕ ಪೂರೈಕೆ ಸರಪಳಿಗಳನ್ನು ಅಡ್ಡಿಪಡಿಸಲು ಮತ್ತು ಆರ್ಥಿಕ ಪ್ರಕ್ಷುಬ್ಧತೆಯನ್ನು ಹೆಚ್ಚಿಸಲು ಅಪಾಯವನ್ನುಂಟು ಮಾಡುತ್ತದೆ.

ಭಾರತದ ಆರ್ಥಿಕತೆಯು 2025ರಲ್ಲಿ ಶೇಕಡಾ 6.3ರಷ್ಟು ಬೆಳೆಯುವ ನಿರೀಕ್ಷೆಯಿದೆ, ಇದು 2024ರಲ್ಲಿ ಶೇಕಡಾ 7.1 ರಷ್ಟು ಕಡಿಮೆಯಾಗಿದೆ. ಸ್ಥಿತಿಸ್ಥಾಪಕ ಖಾಸಗಿ ಬಳಕೆ ಮತ್ತು ಬಲವಾದ ಸಾರ್ವಜನಿಕ ಹೂಡಿಕೆ, ಬಲವಾದ ಸೇವೆಗಳ ರಫ್ತುಗಳ ಜೊತೆಗೆ, ಆರ್ಥಿಕ ಬೆಳವಣಿಗೆಯನ್ನು ಬೆಂಬಲಿಸುತ್ತದೆ" ಎಂದು ವರದಿ ಹೇಳಿದೆ.

ಯುನೈಟೆಡ್ ಸ್ಟೇಟ್ಸ್ ಸುಂಕಗಳು ಸರಕು ರಫ್ತಿನ ಮೇಲೆ ತೂಗುತ್ತಿದ್ದರೂ, ಪ್ರಸ್ತುತ ವಿನಾಯಿತಿ ಪಡೆದ ವಲಯಗಳು; ಔಷಧಗಳು, ಎಲೆಕ್ಟ್ರಾನಿಕ್ಸ್, ಅರೆವಾಹಕಗಳು, ಇಂಧನ ಮತ್ತು ತಾಮ್ರ – ಆರ್ಥಿಕ ಪರಿಣಾಮವನ್ನು ಮಿತಿಗೊಳಿಸಬಹುದು. ಆದರೂ, ಈ ವಿನಾಯಿತಿಗಳು ಶಾಶ್ವತವಾಗಿರುವುದಿಲ್ಲ ಎಂದು ವರದಿ ಹೇಳಿದೆ.

2025ರಲ್ಲಿ ಭಾರತದ 6.3 ಪ್ರತಿಶತ ಬೆಳವಣಿಗೆಯ ಮುನ್ಸೂಚನೆಯು ಈ ವರ್ಷದ ಜನವರಿಯಲ್ಲಿ ಪ್ರಕಟವಾದ ಯುಎನ್ ವಿಶ್ವ ಆರ್ಥಿಕ ಪರಿಸ್ಥಿತಿ ಮತ್ತು ನಿರೀಕ್ಷೆಗಳು 2025ರಲ್ಲಿ ಅಂದಾಜಿಸಲಾದ ಶೇಕಡಾ 6.6ಕ್ಕಿಂತ ಸ್ವಲ್ಪ ಕಡಿಮೆಯಾಗಿದೆ. 2026ರಲ್ಲಿ ಭಾರತದ ಜಿಡಿಪಿ ಬೆಳವಣಿಗೆ ಶೇ.6.4 ರಷ್ಟಿರುತ್ತದೆ ಎಂದು ಅಂದಾಜಿಸಲಾಗಿದೆ.

ಭಾರತದಲ್ಲಿ, ಸ್ಥಿರ ಆರ್ಥಿಕ ಪರಿಸ್ಥಿತಿಗಳ ನಡುವೆಯೂ ನಿರುದ್ಯೋಗವು ಹೆಚ್ಚಾಗಿ ಸ್ಥಿರವಾಗಿದೆ. ಆದರೂ ಉದ್ಯೋಗದಲ್ಲಿನ ನಿರಂತರ ಲಿಂಗ ಅಸಮಾನತೆಯು ಕಾರ್ಯಪಡೆಯ ಭಾಗವಹಿಸುವಿಕೆಯಲ್ಲಿ ಹೆಚ್ಚಿನ ಒಳಗೊಳ್ಳುವಿಕೆಯ ಅಗತ್ಯವನ್ನು ಒತ್ತಿಹೇಳುತ್ತದೆ. ಭಾರತದಲ್ಲಿ, ಹಣದುಬ್ಬರವು 2024ರಲ್ಲಿ ಶೇ.4.9 ರಿಂದ 2025ರಲ್ಲಿ ಶೇ.4.3ಕ್ಕೆ ನಿಧಾನವಾಗಲಿದೆ ಎಂದು ವರದಿ ಹೇಳಿದೆ, ಇದು ಕೇಂದ್ರ ಬ್ಯಾಂಕಿನ ಗುರಿ ವ್ಯಾಪ್ತಿಯಲ್ಲಿಯೇ ಇರುತ್ತದೆ.

ಹಣದುಬ್ಬರ ಕಡಿಮೆಯಾಗುತ್ತಿರುವುದು ದಕ್ಷಿಣ ಏಷ್ಯಾ ಪ್ರದೇಶದ

**2025ರಲ್ಲಿ ಭಾರತದ 6.3 ಪ್ರತಿಶತ ಬೆಳವಣಿಗೆಯ ಮುನ್ಸೂಚನೆಯು ಈ ವರ್ಷದ ಜನವರಿಯಲ್ಲಿ ಪ್ರಕಟವಾದ ಯುಎನ್ ವಿಶ್ವ ಆರ್ಥಿಕ ಪರಿಸ್ಥಿತಿ ಮತ್ತು ನಿರೀಕ್ಷೆಗಳು 2025 ರಲ್ಲಿ ಅಂದಾಜಿಸಲಾದ ಶೇಕಡಾ 6.6 ಕ್ಕಿಂತ ಸ್ವಲ್ಪ ಕಡಿಮೆಯಾಗಿದೆ. 2026 ರಲ್ಲಿ ಭಾರತದ ಜಿಡಿಪಿ ಬೆಳವಣಿಗೆ ಶೇ.6.4 ರಷ್ಟಿರುತ್ತದೆ ಎಂದು ಅಂದಾಜಿಸಲಾಗಿದೆ. ಭಾರತದಲ್ಲಿ, ಸ್ಥಿರ ಆರ್ಥಿಕ ಪರಿಸ್ಥಿತಿಗಳ ನಡುವೆಯೂ ನಿರುದ್ಯೋಗವು ಹೆಚ್ಚಾಗಿ ಸ್ಥಿರವಾಗಿದೆ. ಆದರೂ ಉದ್ಯೋಗದಲ್ಲಿನ ನಿರಂತರ ಲಿಂಗ ಅಸಮಾನತೆಯು ಕಾರ್ಯಪಡೆಯ ಭಾಗವಹಿಸುವಿಕೆಯಲ್ಲಿ ಹೆಚ್ಚಿನ ಒಳಗೊಳ್ಳುವಿಕೆಯ ಅಗತ್ಯವನ್ನು ಒತ್ತಿಹೇಳುತ್ತದೆ. ಭಾರತದಲ್ಲಿ, ಹಣದುಬ್ಬರವು 2024ರಲ್ಲಿ ಶೇ.4.9 ರಿಂದ 2025 ರಲ್ಲಿ ಶೇ.4.3ಕ್ಕೆ ನಿಧಾನವಾಗಲಿದೆ ಎಂದು ವರದಿ ಹೇಳಿದೆ, ಇದು ಕೇಂದ್ರ ಬ್ಯಾಂಕಿನ ಗುರಿ ವ್ಯಾಪ್ತಿಯಲ್ಲಿಯೇ ಇರುತ್ತದೆ.**

ಹೆಚ್ಚಿನ ಕೇಂದ್ರ ಬ್ಯಾಂಕುಗಳು 2024ರಲ್ಲಿ ವಿತ್ತೀಯ ಸಡಿಲಿಕೆಯನ್ನು ಪ್ರಾರಂಭಿಸಲು ಅಥವಾ ಮುಂದುವರಿಸಲು ಅವಕಾಶ ಮಾಡಿಕೊಟ್ಟಿದೆ. ಫೆಬ್ರವರಿ 2023 ರಿಂದ ಶೇ.6.5 ರಷ್ಟಿರುವ ತನ್ನ ನೀತಿ ದರವನ್ನು ಸ್ಥಿರವಾಗಿರಿಸಿಕೊಂಡಿದ್ದ ಭಾರತೀಯ ರಿಸರ್ವ್ ಬ್ಯಾಂಕ್ ಫೆಬ್ರವರಿ 2025 ರಲ್ಲಿ ತನ್ನ ಸಡಿಲಿಕೆ ಚಕ್ರವನ್ನು ಪ್ರಾರಂಭಿಸಿದೆ ಎಂದು ವರದಿ ಗಮನಿಸಿದೆ. ಈ ಮಧ್ಯೆ, ಬಾಂಗ್ಲಾದೇಶ, ಪಾಕಿಸ್ತಾನ ಮತ್ತು ಶ್ರೀಲಂಕಾ ಸರ್ಕಾರಗಳು ಐಎಂಎಫ್ ಬೆಂಬಲಿತ ಕಾರ್ಯಕ್ರಮಗಳ ಅಡಿಯಲ್ಲಿ ಹಣಕಾಸಿನ ಬಲವರ್ಧನೆ ಮತ್ತು ಆರ್ಥಿಕ ಸುಧಾರಣೆಗಳನ್ನು ಮುಂದುವರಿಸುವ ನಿರೀಕ್ಷೆಯಿದೆ.

ಜಾಗತಿಕ ಜಿಡಿಪಿ ಬೆಳವಣಿಗೆ ಈಗ 2025ರಲ್ಲಿ ಕೇವಲ 2.4 ಪ್ರತಿಶತದಷ್ಟು ಇರಲಿದೆ ಎಂದು ವರದಿ ಹೇಳಿದೆ. ಇದು 2024 ರಲ್ಲಿ ಶೇ.2.9 ರಿಂದ ಮತ್ತು ಜನವರಿ 2025ರ ಅಂದಾಜಿಗಿಂತ 0.4 ಪ್ರತಿಶತದಷ್ಟು ಕಡಿಮೆಯಾಗಿದೆ.

"ಜಾಗತಿಕ ಆರ್ಥಿಕತೆಗೆ ಇದು ಆತಂಕದ ಸಮಯ. ಈ ವರ್ಷದ ಜನವರಿಯಲ್ಲಿ, ನಾವು ಎರಡು ವರ್ಷಗಳ ಸ್ಥಿರ, ಕಳಪೆ ಬೆಳವಣಿಗೆಯ ನಿರೀಕ್ಷೆಯಲ್ಲಿದ್ದೇವೆ ಮತ್ತು ಅಂದಿನಿಂದ, ನಿರೀಕ್ಷೆಗಳು ಕಡಿಮೆಯಾಗಿವೆ. ಜೊತೆಗೆ ವಿವಿಧ ಆಯಾಮಗಳಲ್ಲಿ ಗಮನಾರ್ಹ ಏರಿಳಿತಗಳು ಕಂಡುಬರುತ್ತವೆ" ಎಂದು ಯುಎನ್ ಡಿಇಎಸ್‌ಎಯ ಆರ್ಥಿಕ ವಿಶ್ಲೇಷಣೆ ಮತ್ತು ನೀತಿ ವಿಭಾಗದ ನಿರ್ದೇಶಕ ಶಾಂತನು ಮುಖರ್ಜಿ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಜಾಗತಿಕ ಆರ್ಥಿಕ ಬೆಳವಣಿಗೆ 2025ಕ್ಕೆ ಶೇ.2.4 ಮತ್ತು 2026 ಕ್ಕೆ ಶೇ. 2.5ರಷ್ಟು ಇರಲಿದೆ ಎಂದು ಅವರು ಹೇಳಿದರು.

"ಇದು ಪ್ರತಿ ವರ್ಷ 0.4 ಪ್ರತಿಶತದಷ್ಟು ಕೆಳಮುಖ ಪರಿಷ್ಕರಣೆಯಾಗಿದೆ, ಜನವರಿಯಲ್ಲಿ ನಾವು ನಿರೀಕ್ಷಿಸಿದ್ದಕ್ಕಿಂತ ಹಿಂದಿನದು. ಈಗ ಇದು ಆರ್ಥಿಕ ಹಿಂಜರಿತವಲ್ಲ. ಆದರೆ, ನಿಧಾನಗತಿಯು ಹೆಚ್ಚಿನ ದೇಶಗಳು ಮತ್ತು ಪ್ರದೇಶಗಳ ಮೇಲೆ ಪರಿಣಾಮ ಬೀರುತ್ತಿದೆ" ಎಂದು ಮುಖರ್ಜಿ ಹೇಳಿದರು.

ವ್ಯಾಪಾರ ಮತ್ತು ಆರ್ಥಿಕ ನೀತಿಗಳ ಮೇಲಿನ ಅನಿಶ್ಚಿತತೆ, ಅಸ್ಥಿರ ಭೌಗೋಳಿಕ ರಾಜಕೀಯ ಭೂದೃಶ್ಯದೊಂದಿಗೆ ಸೇರಿ, ವ್ಯವಹಾರಗಳು ನಿರ್ಣಾಯಕ ಹೂಡಿಕೆ ನಿರ್ಧಾರಗಳನ್ನು ವಿಳಂಬ ಮಾಡಲು ಅಥವಾ ಕಡಿಮೆ ಮಾಡಲು ಪ್ರೇರೇಪಿಸುತ್ತಿವೆ.

ಈ ಬೆಳವಣಿಗೆಗಳು ಹೆಚ್ಚಿನ ಸಾಲದ ಮಟ್ಟಗಳು ಮತ್ತು ನಿಧಾನಗತಿಯ ಉತ್ಪಾದಕತೆಯ ಬೆಳವಣಿಗೆ ಸೇರಿದಂತೆ ಅಸ್ತಿತ್ವದಲ್ಲಿರುವ ಸವಾಲುಗಳನ್ನು ಸಂಕೀರ್ಣಗೊಳಿಸುತ್ತಿವೆ, ಇದು ಜಾಗತಿಕ ಬೆಳವಣಿಗೆಯ ನಿರೀಕ್ಷೆಗಳನ್ನು ಮತ್ತಷ್ಟು ದುರ್ಬಲಗೊಳಿಸುತ್ತಿದೆ ಎಂದು ವರದಿ ಹೇಳಿದೆ.

ನಿಧಾನಗತಿಯು ವಿಶಾಲ ಆಧಾರಿತವಾಗಿದ್ದು, ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ಆರ್ಥಿಕತೆಗಳೆರಡರ ಮೇಲೂ ಪರಿಣಾಮ ಬೀರುತ್ತದೆ ಎಂದು ವರದಿ ಹೇಳಿದೆ. ಯುನೈಟೆಡ್ ಸ್ಟೇಟ್ಸ್‌ನಲ್ಲಿ ಬೆಳವಣಿಗೆಯು ಗಮನಾರ್ಹವಾಗಿ ಕುಸಿಯುವ ನಿರೀಕ್ಷೆಯಿದೆ, 2024ರಲ್ಲಿ 2.8 ಪ್ರತಿಶತದಿಂದ 2025 ರಲ್ಲಿ 1.6 ಪ್ರತಿಶತಕ್ಕೆ ಇಳಿಯಲಿದೆ, ಹೆಚ್ಚಿನ ಸುಂಕಗಳು ಮತ್ತು ನೀತಿ ಅನಿಶ್ಚಿತತೆಯು ಖಾಸಗಿ ಹೂಡಿಕೆ ಮತ್ತು ಬಳಕೆಯ ಮೇಲೆ ಪರಿಣಾಮ ಬೀರುವ ನಿರೀಕ್ಷೆಯಿದೆ.

# ಎಟಿಎಂನಿಂದ ಆಗುವ 10 ಉಪಯೋಗಗಳು




**ನಮ್ಮ ಎಟಿಎಂ ಯಂತ್ರ ಕೇವಲ ಹಣ ನೀಡುವ ಯಂತ್ರವಾಗಿ ಉಳಿದಿಲ್ಲ. ಬ್ಯಾಂಕಿಗೆ ಭೇಟಿ ನೀಡದೆ ಎಟಿಎಂ ಮೂಲಕ ನೀವು ಅನೇಕ ಹಣಕಾಸು ಮತ್ತು ಹಣಕಾಸು ರಹಿತ ವಹಿವಾಟುಗಳನ್ನು ಮಾಡಬಹುದು. ನಮ್ಮ ಅಕೌಂಟ್‌ನ ಮಿನಿ ಸ್ಟೇಟ್ ಮೆಂಟ್ ಪಡೆಯುವುದರಿಂದ ಹಿಡಿದು ಚೆಕ್ ಬುಕ್, ಬಿಲ್ ಪಾವತಿವರೆಗೆ ಸರ್ವತ್ರ ಎಟಿಎಂ ಹಲವು ಕೆಲಸಗಳನ್ನು ಮಾಡುತ್ತದೆ. ಕೆಲವೊಮ್ಮೆ ಬ್ಯಾಂಕ್‌ಗಳಿಗೆ ಸಾರ್ವಜನಿಕ ರಜೆ, ಮುಷ್ಕರ ಇತ್ಯಾದಿಗಳಿರುತ್ತದೆ. ಅಂತಹ ಸಂದರ್ಭಗಳಲ್ಲಿ ಎಟಿಎಂ ಮೂಲಕ ಮಾಡಬಹುದಾದ ಕೆಲಸಗಳು ಇಂತಿವೆ :**

**1. ನಿಮ್ಮ ಆದಾಯ ತೆರಿಗೆ ಪಾವತಿಸಿ :** ಮೊದಲು ನೀವು ಬ್ಯಾಂಕಿಗೆ ಹೋಗಿ ಈ ಸೌಲಭ್ಯವನ್ನು ಪಡೆದುಕೊಳ್ಳಬೇಕು. ಒಮ್ಮೆ ನಿಮ್ಮ ಪಾನ್ ಸಂಖ್ಯೆ ಮತ್ತು ಟಿಡಿಎ ಅಕೌಂಟ್ ನಂಬರನ್ನು ದಾಖಲಾತಿ ಮಾಡಿಕೊಂಡರೆ ಆಯ್ದ ಎಟಿಎಂಗಳಲ್ಲಿ ಆದಾಯ ತೆರಿಗೆ ಪಾವತಿಸಬಹುದು. ಆಗ ಎಟಿಎಂನಿಂದ ಒಂದು ವಿಶೇಷ ಸಂಖ್ಯೆಯ ರಿಸಿಪ್ಟ್ ಸಿಗುತ್ತದೆ. ಅದನ್ನು ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಹಾಜರುಪಡಿಸಿದರೆ ಚಲನ್ ಸಿಗುತ್ತದೆ. ಗ್ರಾಹಕರ ಅನುಕೂಲಕ್ಕೆ ಸಾಮಾನ್ಯ ಎಲ್ಲಾ ಬ್ಯಾಂಕುಗಳು ಇದನ್ನು ಜಾರಿಗೆ ತರುತ್ತಿವೆ.

**2. ಸ್ಥಿರ ಠೇವಣಿಗಳು ವಾಪಸಾತಿ (ಎಫ್‌ಡಿ) :** ನಿಮಗೆ ತುರ್ತಾಗಿ ಹಣ ಬೇಕೆಂದುಕೊಳ್ಳಿ. ಆಗ ನೀವು ಬ್ಯಾಂಕಿನಲ್ಲಿ ಎಫ್‌ಡಿ ಇಟ್ಟಿದ್ದರೆ ಬ್ಯಾಂಕಿಗೆ ಹೋಗದೆಯೇ ಎಟಿಎಂ ಮೂಲಕ ಹಣ ಪಡೆಯಬಹುದು. ಆದರೆ ನಿಮಗೆ ಈ ಸೌಲಭ್ಯ ಸಿಗಬೇಕೆಂದರೆ ಬ್ಯಾಂಕಿನಲ್ಲಿ ಎಫ್‌ಡಿ ಇಡುವಾಗಲೇ ಅವಕಾಶ ಬೇಕೆಂದು ಕೇಳಬೇಕು. ಎಫ್‌ಡಿಯಲ್ಲಿ ಇಟ್ಟಿರುವ ಎಲ್ಲಾ ಹಣವನ್ನು ಎಟಿಎಂ ಮೂಲಕ ಪಡೆಯಲಾಗುವುದಿಲ್ಲ. ಕೇವಲ ಒಂದು ಭಾಗ ಮಾತ್ರ ಪಡೆಯಬಹುದು.

**3. ಎಫ್‌ಡಿ ಠೇವಣಿ ಆರಂಭಿಸಿ :** ಬ್ಯಾಂಕಿಗೆ ಹೋಗಿ ಸಾಲಿನಲ್ಲಿ ನಿಂತು ಠೇವಣಿ ತೆರೆಯುವುದು, ನಂತರ ಹಣ ಬೇಕೆಂದಾಗ ಬ್ಯಾಂಕಿಗೆ ಹೋಗಿ ತಾಸುಗಟ್ಟಲೆ ನಿಲ್ಲುವ ಬದಲು ನಿಮ್ಮ ಹತ್ತಿರದ ಎಟಿಎಂಗೆ ಹೋಗಿ ಎಫ್‌ಡಿ ಖಾತೆ ತೆರೆಯಬಹುದು. 5 ಸಾವಿರದಿಂದ 50 ಸಾವಿರದವರೆಗೆ ಹಣವನ್ನು ಎಟಿಎಂ ಮೂಲಕ ಪಾವತಿಸಿ ಎಫ್‌ಡಿ ಖಾತೆ ತೆರೆಯಬಹುದು. ನೀವು ಬ್ಯಾಂಕ್ ಖಾತೆ ತೆರೆದ 7 ದಿನಕ್ಕೆ ನಿಮ್ಮ ವಿಳಾಸಕ್ಕೆ ರಸೀದಿ ಬರುತ್ತದೆ. ಈಗಿರುವ ಠೇವಣಿ ಖಾತೆಯನ್ನು

ಎಟಿಎಂ ಮೂಲಕ ನವೀಕರಿಸಲೂಬಹುದು.

**4. ಟ್ಯೂಷನ್ ಫೀಸ್ & ಡೊನೇಷನ್ ಎಟಿಎಂನಲ್ಲಿ ಪಾವತಿ :** ನಿಮ್ಮ ಮಕ್ಕಳ ಶಿಕ್ಷಣ ಸಂಸ್ಥೆಯನ್ನು ಬ್ಯಾಂಕಿನಲ್ಲಿ ದಾಖಲಿಸಿದರೆ ಶಾಲಾ ಶುಲ್ಕವನ್ನು ಎಟಿಎಂ ಮೂಲಕ ಪಾವತಿಸಬಹುದು. ಪ್ರಸ್ತುತ ಈ ಸೌಲಭ್ಯ ಕೆಲವು ಶಿಕ್ಷಣ ಸಂಸ್ಥೆಗಳಿಗೆ ಮಾತ್ರ ಇದೆಯಷ್ಟೆ. ಎಟಿಎಂ ಯಂತ್ರದ ಮೂಲಕ ಎನ್‌ಜಿಓಗಳಿಗೆ ಅಥವಾ ದೇವಸ್ಥಾನ ಟ್ರಸ್ಟ್‌ಗೆ ಹಣ ನೀಡಬಹುದು.

**5. ಪ್ರೀಮಿಯಮ್ ಪಾವತಿ :** ಖಾಸಗಿ ಬ್ಯಾಂಕ್‌ಗಳಾದ ಹೆಚ್‌ಡಿಎಫ್‌ಸಿ, ಆಕ್ಸಿಸ್, ಐಸಿಐಸಿಐ ಮೊದಲಾದ ಬ್ಯಾಂಕ್‌ಗಳ ಮ್ಯೂಚ್ಯುವಲ್ ಫಂಡ್ ಮತ್ತು ಎಲ್‌ಐಸಿ ಪ್ರೀಮಿಯಮ್ ಗಳನ್ನು ಎಟಿಎಂ ಮೂಲಕ ಪಾವತಿಸಬಹುದು. ನಿಮ್ಮ ಬಳಿ ಹಣ, ಪಾಲಿಸಿ ನಂಬರ್ ಮತ್ತು ಖಾತೆ ವಿವರವಿದ್ದರೆ ಸಾಕು.

**6. ಇಂಟರ್ ಬ್ಯಾಂಕ್ ನಿಧಿ ವರ್ಗಾವಣೆ :** ಡೆಬಿಟ್ ಕಾರ್ಡು ಮೂಲಕ ಅದೇ ಬ್ಯಾಂಕಿನ ಅಥವಾ ಬೇರೆ ಬ್ಯಾಂಕಿನ ಖಾತೆದಾರರ ಠೇವಣಿಗೆ ಹಣ ಹಾಕಬಹುದು. ಉದಾಹರಣೆಗೆ ಕೆನರಾ ಬ್ಯಾಂಕ್ ನಲ್ಲಿ ಖಾತೆ ಹೊಂದಿದ್ದೀರಿ ಎಂದಿಟ್ಟುಕೊಳ್ಳಿ. ಎಟಿಎಂ ಮೂಲಕ ಅದೇ ಬ್ಯಾಂಕಿನಲ್ಲಿ ಖಾತೆ ಹೊಂದಿರುವವ ಠೇವಣಿಗೆ ಅಥವಾ ಬೇರೆ ಬ್ಯಾಂಕ್‌ಗಳ ಠೇವಣಿಗೆ ಕೂಡ ಹಣ ಪಾವತಿಸಬಹುದು. ಹಣ ಸ್ವೀಕರಿಸುವವರ 16 ಅಂಕೆಗಳ ಡೆಬಿಟ್ ಕಾರ್ಡು ನಂಬರು ನಿಮಗೆ ಗೊತ್ತಿರಬೇಕು. ಅದೇ ಬ್ಯಾಂಕಿಗಾದರೆ 5 ಸಾವಿರದಿಂದ 49 ಸಾವಿರದ 999 ರೂಪಾಯಿ, ಬೇರೆ ಬ್ಯಾಂಕಿನ ಖಾತೆಗಾದರೆ 50 ಸಾವಿರದವರೆಗೆ ಹಣವನ್ನು ಡೆಬಿಟ್ ಕಾರ್ಡು ಮೂಲಕ ವರ್ಗಾವಣೆ ಮಾಡಬಹುದು.

**7. ಹಣದ ಠೇವಣಿ :** ಬ್ಯಾಂಕಿಗೆ ಹೋಗಿ ಠೇವಣಿ ರಸೀದಿ ತುಂಬಿ ಗಂಟೆಗಟ್ಟಲೆ ಸರದಿ ಸಾಲಿನಲ್ಲಿ ನಿಲ್ಲುವ ಅವಶ್ಯಕತೆಯಿಲ್ಲ. ಎಟಿಎಂ ಮೂಲಕ ಹಣ ವರ್ಗಾವಣೆ ಮಾಡಿದರೆ ಅದು ಕ್ಷಣಾರ್ಧದಲ್ಲಿ ತಲುಪುತ್ತದೆ. ಆಕ್ಸಿಸ್ ಬ್ಯಾಂಕ್ ಭಾನುವಾರ ಕೂಡ ಈ ಸೌಲಭ್ಯವನ್ನು ನೀಡುತ್ತದೆ. ಠೇವಣಿ ಮೊತ್ತ 49 ಸಾವಿರದ 500 ರೂಪಾಯಿಗಳವರೆಗೆ ಇರಬೇಕಷ್ಟೆ.

**8. ಸೌಲಭ್ಯ ಬಿಲ್ಲು ಪಾವತಿ :** ಎಟಿಎಂಗಳಲ್ಲಿ ವಿದ್ಯುತ್ ಮತ್ತು ದೂರವಾಣಿ ಬಿಲ್ ಪಾವತಿ ಮಾಡಬಹುದು. ಕೆಲವು ಎಟಿಎಂಗಳಲ್ಲಿ ಶೇಕಡಾ 1ರವರೆಗೆ ಕ್ಯಾಶ್ ಬ್ಯಾಕ್ ಆಫರ್‌ಗಳನ್ನು ಕೂಡ ಸಿಗುತ್ತದೆ.



**9. ಮೊಬೈಲ್ ರಿಚಾರ್ಜ್ ಮತ್ತು ರೈಲ್ವೆ ಟಿಕೆಟ್ :** ನೀವು ಆಯ್ದ ಎಟಿಎಂಗಳಲ್ಲಿ ರೈಲ್ವೆ ಟಿಕೆಟ್‌ನ್ನು ಎಟಿಎಂ ಮೂಲಕ ಪಾವತಿ ಮಾಡಬಹುದು. ಪ್ರಿ–ಪೇಯ್ಡ್ ಮೊಬೈಲ್ ಬಿಲ್‌ನ್ನು ಎಟಿಎಂನಲ್ಲಿ ರಿಚಾರ್ಜ್ ಮಾಡಬಹುದು. ಎಟಿಎಂನಲ್ಲಿ ಸುಲಭವಾಗಿ, ಬೇಗನೆ ಬಿಲ್ ಪಾವತಿಸಲು ಸಾಧ್ಯವಿದೆ. ಸಂಖ್ಯೆ ಮತ್ತು ಹಣವನ್ನು ಎಟಿಎಂ ಯಂತ್ರದಲ್ಲಿ ಒತ್ತಿದರೆ ಸಾಕು.

**10. ನಿಮ್ಮ ಪಿನ್ ಸಂಖ್ಯೆ ಬದಲಾವಣೆ :** ನಿಮ್ಮ ಬಳಿ ಮೂರ್ನಾಲ್ಕು ಎಟಿಎಂಗಳಿದ್ದರೆ ಎಲ್ಲಾ ಬ್ಯಾಂಕುಗಳ ಎಟಿಎಂ ಸಂಖ್ಯೆಯನ್ನು ನೆನಪಿನಲ್ಲಿಟ್ಟುಕೊಳ್ಳಲು ಕಷ್ಟವಾಗುತ್ತದೆ. ಆಗ ನಿಮಗೆ ನೆನಪು ಇಟ್ಟುಕೊಳ್ಳಲು ಸುಲಭವಾಗುವ ನಂಬರ್‌ಗೆ ಬದಲಾಯಿಸಬಹುದು. ಎಟಿಎಂನಲ್ಲಿ ಹೊಸ ಚೆಕ್‌ಬುಕ್‌ಗೆ ಮನವಿ ಮಾಡಬಹುದು. ಮಿನಿ ಸ್ಟೇಟ್‌ಮೆಂಟ್ ಪಡೆಯಬಹುದು. ಪಾಸ್ ಬುಕ್ ಅಪ್ ಡೇಟ್ ಮಾಡಬಹುದು. ಖಾತೆ ವಿವರ ಪಡೆಯಬಹುದು. ಇವೆಲ್ಲವನ್ನೂ ನೀವು ರಿಕ್ವೆಸ್ಟ್ ಮಾಡಿದ 7 ದಿನಗಳಲ್ಲಿ ನಿಮ್ಮ ಅಂಚೆ ವಿಳಾಸಕ್ಕೆ ಬರುತ್ತದೆ.

**ಕೊರತೆಗಳು :** ಆದರೆ ನೆನಪಿಡಿ. ಎಟಿಎಂ ಟ್ರಾನ್ಸಾಕ್ಷನ್ ತಿಂಗಳಲ್ಲಿ ಇಷ್ಟೇ ದಿನ ನಡೆಸಬಹುದೆಂಬ ಲಿಮಿಟೇಷನ್ ಇದೆ. ಯಾವುದೇ ರೀತಿಯ ವಹಿವಾಟು ತಿಂಗಳಲ್ಲಿ ಎಟಿಎಂನಲ್ಲಿ 8 ಸಲ ಮಾತ್ರ ನಡೆಸಬಹುದಷ್ಟೆ. ಉದಾಹರಣೆಗೆ ಸ್ಟೇಟ್ ಬ್ಯಾಂಕ್ ಎಟಿಎಂ ನಿಮ್ಮ ಬಳಿ ಇದೆ ಎಂದಿಟ್ಟುಕೊಳ್ಳಿ. ಸ್ಟೇಟ್ ಬ್ಯಾಂಕ್ ಎಟಿಎಂನಲ್ಲಿ 5 ಸಲ ಇತರ ಬ್ಯಾಂಕ್ ಎಟಿಎಂನಲ್ಲಿ 3 ಬಾರಿ ಉಚಿತವಾಗಿ ವಹಿವಾಟು ನಡೆಸಬಹುದು.ಅದಕ್ಕಿಂತ ಹೆಚ್ಚು ಬಾರಿಯಾದರೆ ಪ್ರತಿ ವಹಿವಾಟಿಗೆ 20 ರೂಪಾಯಿ ಮತ್ತು ಸೇವಾ ತೆರಿಗೆ ಶುಲ್ಕವಾಗುತ್ತದೆ.

# ಸಂಸ್ಥೆಗಳಲ್ಲಿನ ಹುದ್ದೆಗಳ ಕೆಲಸ ಕೃತಕ ಬುದ್ಧಿಮತ್ತೆ (Ai) ಹೆಗಲಿಗೆ



ಉದ್ಯಮದ ಮೂಲಗಳ ಪ್ರಕಾರ, ಮಾಹಿತಿ ತಂತ್ರಜ್ಞಾನ ಪ್ರಮುಖ ಸಂಸ್ಥೆಯಾದ ಐಬಿಎಂ ಈಗಾಗಲೇ ಕನಿಷ್ಠ 200 ಹೆಚ್‌ಆರ್ ವೃತ್ತಿಪರರನ್ನು ಬದಲಾಯಿಸಿ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್‌ಗೆ ವಹಿಸುವ ಮೂಲಕ ಕೆಲಸ ಮಾಡಿಸಿಕೊಳ್ಳುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಕೃತಕ ಬುದ್ಧಿಮತ್ತೆ ಹೆಚ್ಚು ಜನಪ್ರಿಯವಾಗುತ್ತಿದೆ, ಇನ್ನು ಕೆಲ ವರ್ಷಗಳಲ್ಲಿ ಅನೇಕ ಕ್ಷೇತ್ರಗಳಲ್ಲಿ ಮಾನವ ಮಾಡುವ ಕೆಲಸವನ್ನು ಎಐ ಮಾಡುತ್ತದೆ ಎಂಬ ಚರ್ಚೆಗಳು ನಡೆಯುತ್ತವೆ. ಇಂಟರ್ನ್ಯಾಷನಲ್ ಬ್ಯುಸಿನೆಸ್ ಮೆಷಿನ್ಸ್ ಕಾರ್ಪೊರೇಷನ್ ತನ್ನ ಕಾರ್ಯಾಚರಣೆಗಳಲ್ಲಿ ಕೃತಕ ಬುದ್ಧಿಮತ್ತೆಯನ್ನು ಸಂಯೋಜಿಸುವ ಮೂಲಕ ಕಾರ್ಯತಂತ್ರದ ರೂಪಾಂತರಕ್ಕೆ ಈಗಾಗಲೇ ಒಳಗಾಗುತ್ತಿದೆ. ಇದರಿಂದ ಮಾನವ ಸಂಪನ್ಮೂಲದ ಸ್ಥಾನವನ್ನು ಎಐ ಆಕ್ರಮಿಸಿಕೊಳ್ಳುತ್ತಿದೆ.

ಉದ್ಯಮದ ಮೂಲಗಳ ಪ್ರಕಾರ, ಮಾಹಿತಿ ತಂತ್ರಜ್ಞಾನ ಪ್ರಮುಖ ಸಂಸ್ಥೆಯಾದ ಐಬಿಎಂ ಈಗಾಗಲೇ ಕನಿಷ್ಠ 200 ಹೆಚ್‌ಆರ್ ವೃತ್ತಿಪರರನ್ನು ಬದಲಾಯಿಸಿ ಎಐಗೆ ಬದಲಿಸುವ ಮೂಲಕ ಕೆಲಸ ಮಾಡಿಸಿಕೊಳ್ಳುತ್ತಿದೆ. ಐಬಿಎಂನ ಹೆಚ್‌ಆರ್ ಕಾರ್ಯಗಳಲ್ಲಿ ಎಐಯನ್ನು ಅಳವಡಿಸಿಕೊಳ್ಳುವುದು ಉದ್ಯಮದಾದ್ಯಂತ ಯಾಂತ್ರೀಕರಣದ ಕಡೆಗೆ ಈ ವ್ಯಾಪಕ ಬದಲಾವಣೆಯನ್ನು ಪ್ರತಿಬಿಂಬಿಸುತ್ತದೆ. ಕಂಪನಿಯು ಮಾನವ ಬಂಡವಾಳ ಅಭಿವೃದ್ಧಿಯೊಂದಿಗೆ ತಾಂತ್ರಿಕ ಪ್ರಗತಿಯನ್ನು ಸಮತೋಲನಗೊಳಿಸುವ ಗುರಿಯನ್ನು ಹೊಂದಿದೆ, ಎಐ–ವರ್ಧಿತ ಪರಿಸರದಲ್ಲಿ ಅಭಿವೃದ್ಧಿ ಹೊಂದಲು ತನ್ನ ಕಾರ್ಯಪಡೆ ಸಿದ್ಧವಾಗಿದೆ ಎಂದು ಹೇಳುತ್ತದೆ.

ಐಬಿಎಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅರವಿಂದ್ ಕೃಷ್ಣ ಎಐ ಏಜೆಂಟ್‌ಗಳು ಈಗಾಗಲೇ ಹಲವು ಹುದ್ದೆಗಳನ್ನು ಎಐ ಏಜೆಂಟ್‌ಗಳಿಗೆ ಬದಲಾಯಿಸಲಾಗಿದೆ ಎಂದು ಹೇಳಿದ್ದಾರೆ. ಈ ಕಡಿತದ ಹೊರತಾಗಿಯೂ, ಕಂಪನಿಯ ಒಟ್ಟಾರೆ ಉದ್ಯೋಗವು ಹೆಚ್ಚಾಗಿದೆ, ಪ್ರೋಗ್ರಾಮಿಂಗ್, ಮಾರಾಟ ಮತ್ತು ಮಾರ್ಕೆಟಿಂಗ್‌ನಂತಹ ಕ್ಷೇತ್ರಗಳಲ್ಲಿ ಹೆಚ್‌ಆರ್ ನೇಮಕಾತಿಯಿದೆ. ಇವು ವಿಮರ್ಶಾತ್ಮಕ ಚಿಂತನೆ ಮತ್ತು ಮಾನವ ಸಂವಹನದ ಮೇಲೆ ಹೆಚ್ಚು ಅವಲಂಬಿತವಾಗಿರುವ ಪಾತ್ರಗಳಾಗಿವೆ.

ಕಾರ್ಯತಂತ್ರದ ತಾರ್ಕಿಕತೆ, ಉದ್ಯೋಗ ಪರಿಶೀಲನೆ ಮತ್ತು ಆಂತರಿಕ ವರ್ಗಾವಣೆಗಳಂತಹ ದಿನನಿತ್ಯದ ಮಾನವ

# ಸ್ಮಾರ್ಟ್‌ವಾಚ್‌ನಿಂದ ಎಟಿಎಂ ಪಿನ್ ಬಯಲು




ಸ್ಮಾರ್ಟ್‌ವಾಚ್ ಹಾಗೂ ಫಿಟ್ನೆಸ್ ಟ್ರ್ಯಾಕರ್‌ಗಳಂತಹ, ಧರಿಸಬಹುದಾದ ಸಾಧನಗಳಿಂದ ಸೈಬರ್ ಕ್ರಿಮಿನಲ್‌ಗಳು ಸುಲಭವಾಗಿ ಎಟಿಎಂ ಪಿನ್‌ನಂಬರ್, ಎಲೆಕ್ಟ್ರಾನಿಕ್ ಡೋರ್‌ಲಾಕ್‌ಗಳ ಪಾಸ್‌ವರ್ಡ್ ಮುಂತಾದ ಸೂಕ್ಷ್ಮ ಮಾಹಿತಿ ಕದಿಯಬಹುದಾಗಿದೆ ಎಂದು ಅಧ್ಯಯನವೊಂದು ಎಚ್ಚರಿಸಿದೆ.

ಮೊದಲ ಪ್ರಯತ್ನದಲ್ಲೇ ಶೇ.80ರಷ್ಟು ನಿಖರವಾಗಿ ಮಾಹಿತಿ ಕದಿಯುವುದು ಸಾಧ್ಯವಾಗಿದೆ ಎಂದು ಅಮೆರಿಕದ ಬಿಂಗ್‌ಹ್ಯಾಮ್ಟನ್ ವಿವಿಯ ಸಂಶೋಧಕ ಯಾನ್ ವಾಂಗ್ ಹೇಳಿದ್ದಾರೆ. ಧರಿಸಬಹುದಾದ ಸಾಧನಗಳಲ್ಲಿ ಬಳಸುವ ತಂತ್ರಜ್ಞಾನದಲ್ಲಿ ಒಳಗೊಂಡಿರುವ ಸೆನ್ಸರ್‌ಗಳಿಂದ ಸಂಗ್ರಹಿಸಲಾದ ಮಾಹಿತಿಯನ್ನು, ಕಂಪ್ಯೂಟರ್ ಅಲ್ಗಾರಿದಂ ಜತೆಗೆ ಹೋಲಿಕೆ ಮಾಡಿ, ಪಿನ್ ನಂಬರ್ ಹಾಗೂ ಪಾಸ್‌ವರ್ಡ್‌ಗಳನ್ನು ಹೊರಗೆಡಹುವಲ್ಲಿ ಯಶಸ್ವಿಯಾಗಿದ್ದಾರೆ. ಇದರಲ್ಲಿ ಮೊದಲ ಯತ್ನದಲ್ಲಿ ಶೇ.80ರಷ್ಟು ಹಾಗೂ ಮೂರನೇ ಪ್ರಯತ್ನದ ಬಳಿಕ ಶೇ.90ರಷ್ಟು ಯಶಸ್ಸು ಸಾಧಿಸಿದ್ದಾರೆ. ಇದಕ್ಕಾಗಿ 5000 ಕೀ–ಎಂಟ್ರಿಗಳನ್ನು ಪರೀಕ್ಷೆಗೊಳಪಡಿಸಲಾಗಿತ್ತು.




ಸಂಪನ್ಮೂಲ ಪ್ರಕ್ರಿಯೆಗಳನ್ನು ಸ್ವಯಂಚಾಲಿತಗೊಳಿಸುವ ಮೂಲಕ ಕಾರ್ಯಾಚರಣೆಯ ದಕ್ಷತೆಯನ್ನು ಹೆಚ್ಚಿಸುವುದು AI ಏಕೀಕರಣದ ಪ್ರಾಥಮಿಕ ಗುರಿಯಾಗಿದೆ. ಈ ಬದಲಾವಣೆಯು ಮಾನವ ಸಂಪನ್ಮೂಲ ವೃತ್ತಿಪರರಿಗೆ ಸೃಜನಶೀಲತೆಯ ಅಗತ್ಯವಿರುವ ಹೆಚ್ಚಿನ ಮೌಲ್ಯದ, ಕಾರ್ಯತಂತ್ರದ ಉಪಕ್ರಮಗಳ ಕಡೆಗೆ ಅನುವು ಮಾಡಿಕೊಡುತ್ತದೆ.

ಉದ್ಯೋಗ ಮೇಲೆ ಪರಿಣಾಮ ಮುಂದಿನ ಐದು ವರ್ಷಗಳಲ್ಲಿ ಹೆಚ್‌ಆರ್ ಸೇರಿದಂತೆ ಗ್ರಾಹಕ–ಮುಖಿಯಲ್ಲದ ಪಾತ್ರಗಳಲ್ಲಿ ಶೇಕಡಾ 30ರವರೆಗೆ ಎಐಯಿಂದ ಬದಲಾಯಿಸಲ್ಪಡಬಹುದು ಎಂದು ಐಬಿಎಂ ಅಂದಾಜಿಸಿದೆ. ಈ ಅಂದಾಜಿನ ಪ್ರಕಾರ ಸುಮಾರು 7,800 ಹುದ್ದೆಗಳ ಮೇಲೆ ಪರಿಣಾಮ ಬೀರುತ್ತದೆ.

ಐಬಿಎಂನ ಮುಖ್ಯ ಮಾನವ ಸಂಪನ್ಮೂಲ ಅಧಿಕಾರಿ ನಿಕಲ್ ಲಾಮೊರೆಕ್ಸ್, ಎಐಯಿಂದ ಸಂಪೂರ್ಣ ಉದ್ಯೋಗಾವಕಾಶ ಹೋಗುವುದಿಲ್ಲ. ಬದಲಿಗೆ ಅವುಗಳೊಳಗಿನ ನಿರ್ದಿಷ್ಟ ಕಾರ್ಯಗಳನ್ನು ಸ್ವಯಂಚಾಲಿತಗೊಳಿಸುತ್ತದೆ ಎಂದು ಒತ್ತಿ ಹೇಳಿದರು. ಕೆಲವು ಹುದ್ದೆಗಳನ್ನು ಸಂಪೂರ್ಣವಾಗಿ ಬದಲಾಯಿಸಲಾಗುವುದು ಎಂದರು.

ಕೆಲವು ಹೆಚ್‌ಆರ್ ಕಾರ್ಯಗಳನ್ನು ಎಐಗೆ ಬದಲಿಸುವ ಸಂದರ್ಭದಲ್ಲಿ ಐಬಿಎಂ ಏಕಕಾಲದಲ್ಲಿ ವಿಶಿಷ್ಟ ಮಾನವ ಕೌಶಲ್ಯಗಳ ಅಗತ್ಯವಿರುವ ಕ್ಷೇತ್ರಗಳಲ್ಲಿ ವಿಸ್ತರಿಸುತ್ತಿದೆ. ಪ್ರೋಗ್ರಾಮಿಂಗ್, ಮಾರಾಟ ಮತ್ತು ಮಾರ್ಕೆಟಿಂಗ್ ವಲಯಗಳಲ್ಲಿ ನೇಮಕಾತಿಯಲ್ಲಿ ಕಂಪೆನಿ ಹೂಡಿಕೆ ಮುಂದುವರಿದಿದೆ.





# ಶ್ರೀ ಸಿದ್ಧೇಶ್ವರ ಸಹಕಾರಿ ಬ್ಯಾಂಕ ನಿ., ವಿಜಯಪುರ

ಆಡಳಿತ ಕಚೇರಿ: ಶ್ರೀ ಸಿದ್ಧೇಶ್ವರ ರಸ್ತೆ, ವಿಜಯಪುರ 586 101 Tel: 0852-251272, E-Mail: shiddeshwarbank@gmail.com

## ದಿನಾಂಕ 31-03-2025 ರ ಅಂತ್ಯಕ್ಕಿದ್ದಂತೆ ಬ್ಯಾಂಕಿನ ಹಣಕಾಸಿನ ಅಂಕಿ-ಅಂಶಗಳ ವಿವರ (ರೂ. ಕೋಟಿಗಳಲ್ಲಿ)

| ಕ್ರಸಂ. | ವಿವರಗಳು | 31-03-2025 | ಕ್ರಸಂ. | ವಿವರಗಳು | 31-03-2025 |
|---|---|---|---|---|---|
| 1 | ಶೇರು ಬಂಡವಾಳ | 17.25 | 6 | ಹೂಡಿಕೆಗಳು | 309.93 |
| 2 | ನಿಧಿಗಳು | 53.54 | 7 | ನಿವ್ವಳ ಲಾಭ | 3.15 |
| 3 | ಠೇವುಗಳು | 542.55 | 8 | ಅನುತ್ಪಾದಕ ಆಸ್ತಿಗಳ ಮೊತ್ತ ಶೇಕಡಾವಾರು | 24.88 |
| 4 | ಸಾಲ ಮತ್ತು ಮುಂಗಡಗಳು | 266.37 | 9 | ನಿವ್ವಳ ಅನುತ್ಪಾದಕ ಆಸ್ತಿಗಳ ಮೊತ್ತ ಹಾಗೂ ಶೇಕಡಾವಾರು | 1.94% |
| 5 | ದುಡಿಯುವ ಬಂಡವಾಳ | 642.71 | 10 | ಬಂಡವಾಳ ಪರ್ಯಾಪ್ತ ಅನುಪಾತ CRAR | 17.19 |

## ಬ್ಯಾಂಕಿನ ಆಡಳಿತ ಮಂಡಳಿಯ ಸದಸ್ಯರು

| | | | | | |
|---|---|---|---|---|---|
| 1 | ಶ್ರೀ ವಿಜಯಕುಮಾರ ಡಿ. ಇಜೇರಿ. | ಅಧ್ಯಕ್ಷರು. | 12 | ಡಾ|| ಶ್ರೀ ಸಂಜೀವ ಎಸ್. ಪಾಟೀಲ (ಮುಳವಾಡ) | ನಿರ್ದೇಶಕರು |
| 2 | ಶ್ರೀಮತಿ.ಸೌಭಾಗ್ಯ ಎಸ್.ಭೋಗಶೆಟ್ಟಿ. | ಉಪಾಧ್ಯಕ್ಷರು. | 13 | ಶ್ರೀ ವ್ಹಿ.ಎಸ್. ಜತ್ತಿ | ನಿರ್ದೇಶಕರು |
| 3 | ಶ್ರೀ ಶ್ರೀಹರ್ಷ ಎಸ್. ಪಾಟೀಲ. | ನಿರ್ದೇಶಕರು | 14 | ಶ್ರೀಮತಿ ಕೆ. ವ್ಹಿ. ಅವರಂಗಬಾದ | ನಿರ್ದೇಶಕರು |
| 4 | ಶ್ರೀ ಜಿ.ಎಸ್. ಗಚ್ಚಿನಮಠ | ನಿರ್ದೇಶಕರು | 15 | ಶ್ರೀಮತಿ ಬೋರಮ್ಮ ಬಿ. ಗೊಬ್ಬೂರ | ನಿರ್ದೇಶಕರು |
| 5 | ಶ್ರೀ ಎಸ್.ಜಿ. ಗಚ್ಚಿನಕಟ್ಟಿ | ನಿರ್ದೇಶಕರು | 16 | ಶ್ರೀ ಪಿ. ಎಸ್. ಬಗಲಿ | ನಿರ್ದೇಶಕರು |
| 6 | ಶ್ರೀ ವ್ಹಿ.ಎಸ್. ಪಾಟೀಲ (ಮಸಬಿನಾಳ) | ನಿರ್ದೇಶಕರು | 17 | ಶ್ರೀ ಜಿ.ಎಸ್.ಗಂಗನಳ್ಳಿ | ನಿರ್ದೇಶಕರು |
| 7 | ಶ್ರೀ ಆಯ್.ಎಮ್. ಪಟ್ಟಣಶೆಟ್ಟಿ | ನಿರ್ದೇಶಕರು | 18 | ಶ್ರೀ ಎಸ್.ಎಸ್. ಭೋವಿ | ನಿರ್ದೇಶಕರು |
| 8 | ಶ್ರೀ ಆರ್.ಎಮ್. ಪಾಟೀಲ (ಉಪ್ಪಲದಿನ್ನಿ) | ನಿರ್ದೇಶಕರು | 19 | ಶ್ರೀ ಎ.ಎಮ್. ನಾಯ್ಕೋಡಿ | ನಿರ್ದೇಶಕರು |
| 9 | ಶ್ರೀ ಆರ್.ಎಚ್.ಬಿದನೂರ | ನಿರ್ದೇಶಕರು | 20 | ಶ್ರೀ ಎಸ್.ಎಸ್. ಪಾಟೀಲ (ತೊನಶ್ಯಾಳ) | ವೃತ್ತಿಪರ ನಿರ್ದೇಶಕರು |
| 10 | ಶ್ರೀ ಆರ್.ಎಸ್.ಬಿಜ್ಜರಗಿ | ನಿರ್ದೇಶಕರು | 21 | ಶ್ರೀ ಎಮ್.ಸಿ. ಗುಂದಗಿ | ವೃತ್ತಿಪರ ನಿರ್ದೇಶಕರು |
| 11 | ಶ್ರೀ ವ್ಹಿ.ಡಿ. ಕರ್ಪೂರಮಠ | ನಿರ್ದೇಶಕರು | 22 | ಶ್ರೀ ಜೆ.ಬಿ. ಕಲ್ಯಾಣಶೆಟ್ಟಿ | ಪ್ರಧಾನ ವ್ಯವಸ್ಥಾಪಕರು(ಪ್ರ) |

| ಠೇವುಗಳ ಮೇಲಿನ ಬಡ್ಡಿದರದ ವಿವರ | | ಸಾಲಗಳ ಮೇಲಿನ ಬಡ್ಡಿದರದ ವಿವರ | |
|---|---|---|---|
| 30 ದಿವಸಗಳಿಗೆ | 3.00% | ಪಗಾರ ಅಧಿಕಾರ ಪತ್ರದ ಮೇಲಿನ ಜಾತಿನೀಶಿ (ಈಎಂಐ) | 13.50% |
| 31ರಿಂದ 90 ದಿವಸಗಳವರೆಗೆ | 4.00% | ರೋಖಪತ್ತ ಸಾಲ | 14.00% |
| 91 ರಿಂದ 180 ದಿವಸಗಳವರೆಗೆ | 5.00% | ಗೃಹ ನಿರ್ಮಾಣ ಸಾಲ (ಈಎಂಐ) | 9.00% |
| 181 ದಿವಸಗಳಿಂದ 364 ದಿವಸಗಳವರೆಗೆ | 6.50% | ಮಾಧ್ಯಮಿಕ ಸಾಲ (ಈಎಂಐ) | 12.50% |
| 1 ವರ್ಷ/365 ದಿವಸಗಳು ಮತ್ತು ಮೇಲ್ಪಟ್ಟು 2 ವರ್ಷಗಳವರೆಗೆ | 8.00% | ಎಚ್ ಪಿ (ಈಎಂಐ) 1.ದ್ವಿಚಕ್ರ ವಾಹನ<br>2.ನಾಲ್ಕು ಚಕ್ರ ವಾಹನ | 13.50%<br>12.50% |
| 2 ವರ್ಷ ಮತ್ತು ಮೇಲ್ಪಟ್ಟು 10 ವರ್ಷಗಳವರೆಗೆ | 8.00% | ಚಿಕ್ಕ ಉದ್ದಿಮೆ ಸಾಲ (ಈಎಂಐ) | 13.00 |
| ಉಳಿತಾಯ ಖಾತೆ | 3.00% | ಓ.ಡಿ.ಎಂ.ಎಸ್.ಎಂ.ಇ. | 9.00% |
| ಹಿರಿಯ ನಾಗರಿಕರಿಗೆ ಮೇಲ್ಕಾಣಿಸಿದ ಎಲ್ಲ ಅವಧಿಯ ಠೇವುಗಳಿಗೆ ಶೇಕಡಾ 0.5 % ಹೆಚ್ಚಿನ ಬಡ್ಡಿದರ ನೀಡುವುದು | | ಬಂಗಾರ ಆಭರಣಗಳ ಸಾಲ ಕೇವಲ 0.83% ಬಡ್ಡಿದರದಲ್ಲಿ ಪ್ರತಿ ತಿಂಗಳಿಗೆ | 10.00% |
| | | ಎನ್.ಎಸ್.ಇ ಮತ್ತು ಕಿಸಾನ್ ವಿಕಾಸ ಪತ್ರಗಳ ಮೇಲಿನ ಅಡವಿನ ಸಾಲ | 12.00% |

**ವಿಶೇಷವಾಗಿ ತಮ್ಮ ಗಮನಕ್ಕೆ**

**ಶಿವಾನುಭವ ಕ್ಯಾಶ್ ಸರ್ಟಿಫಿಕೆಟ್ ಠೇವಿನ ಮೇಲೆ ಆಕರ್ಷಕ 9% ಬಡ್ಡಿದರದಲ್ಲಿ 8 ವರ್ಷಕ್ಕೆ ದ್ವಿಗುಣ**

**ಶ್ರೀ ಸಿದ್ಧೇಶ್ವರ ಆಸ್ತಿ ಸಾಲ ರೂ. 10ಲಕ್ಷ ಮೇಲ್ಪಟ್ಟು ರೂ. 1 ಕೋಟಿಯವರೆಗೆ (ಸಿಬಿಲ್ 700ರ ವರೆಗೆ ಶೇ.13.00%, ಸಿಬಿಲ್ 700 ಕ್ಕಿಂತ ಮೇಲ್ಪಟ್ಟು ಶೇ.12.50%.**



# ರಡ್ಡಿ ಸಹಕಾರ ಬ್ಯಾಂಕ ನಿಯಮಿತ, ಧಾರವಾಡ

ಪ್ರಧಾನ ಕಚೇರಿ: ಬ್ಯಾಂಕ ರೋಡ, ಧಾರವಾಡ-580 001 ಫೋನ್ : 0836-2448118

ನೋಂದಣಿ: 724 ರಿಜರ್ವ ಬ್ಯಾಂಕ ಲೈಸನ್ಸ್:ಯುಬಿಡಿ: ಕೆ.ಎನ್.1140 ಪಿ ಸ್ಥಾಪನೆ : 04-02-1914
website :www.raddibank.com, e-mail = headoffice@raddibank.com, accounts@raddibank.com




**ಶಾಖೆಗಳು**

ಧಾರವಾಡ, ಹುಬ್ಬಳ್ಳಿ, ಹಾವೇರಿ, ರಾಣೆಬೆನ್ನೂರ, ಗದಗ, ನವಲಗುಂದ, ಅಣ್ಣಿಗೇರಿ, ನರಗುಂದ, ಮುಳಗುಂದ, ಬೆಳಗಾಂವ, ಸವದತ್ತಿ, ರಾಮದುರ್ಗ, ಗೋಕಾಕ, ಯರಗಟ್ಟಿ, ಮೂಡಲಗಿ, ಬಾಗಲಕೋಟ, ಜಮಖಂಡಿ, ಮುಧೋಳ, ಗಲಗಲಿ, ವಿಜಯಪುರ, ಮುದ್ದೇಬಿಹಾಳ, ಚಿತ್ರದುರ್ಗ, ದಾವಣಗೆರೆ, ಹೂವಿನಹಡಗಲಿ, ಕೊಪ್ಪಳ, ಮಹಿಳಾ ವಿಸ್ತೀರ್ಣ ಮುಂಗಟ್ಟೆ ಸರಸ್ವತಪೂರ, ಧಾರವಾಡ.

- 111 ವರ್ಷಗಳ ಸಾರ್ಥಕ ಸಹಕಾರ ರಂಗದ ಸೇವೆ.
- ಶೇರ ಬಂಡವಾಳ ರೂ. 21.55 ಕೋಟಿ (ದಿ:31-03-2025ಕ್ಕೆ ಇದ್ದಂತೆ).
- ಆಪದ್ಧನ ಮತ್ತು ಇತರ ಕಾಯ್ದಿಟ್ಟ ನಿಧಿಗಳು ರೂ, 80.91 ಕೋಟಿ.
- ದುಡಿಯುವ ಬಂಡವಾಳ ರೂ.811.36 ಕೋಟಿ (ದಿ:31-03-2025ಕ್ಕೆ ಇದ್ದಂತೆ).
- ಠೇವಣಿಗಳು ರೂ. 708.91 ಕೋಟಿ (ದಿ:31-03-2025ಕ್ಕೆ ಇದ್ದಂತೆ).
- ಸಾಲ ಹಾಗೂ ಮುಂಗಡಗಳು ರೂ, 423.71 ಕೋಟಿ.
- ಠೇವಣಿಗಳಿಗೆ ಡಿ.ಆಯ್.ಸಿ.ಜಿ.ಸಿ ವಿಮಾ ರಕ್ಷಣೆ ಹೊಂದಿರುತ್ತವೆ.
- ಠೇವಣಿಗಳ ಮೇಲೆ ಆಕರ್ಷಕ ಬಡ್ಡಿದರ.
- ಹಿರಿಯ ನಾಗರಿಕರಿಗೆ 0.50% ಹೆಚ್ಚಿನ ಬಡ್ಡಿದರ ಸೌಲಭ್ಯ.
- ಸೇಫ್ ಡಿಪಾಜಿಟ್ ಲಾಕರ್‌ಗಳ ಸೌಲಭ್ಯ.
- ಕಡಿಮೆ ಬಡ್ಡಿದರದಲ್ಲಿ ಸಾಲದ ಸೌಲಭ್ಯ.
- ಸಂಪೂರ್ಣ ಗಣಕೀಕೃತ ಕೋರ್ ಬ್ಯಾಂಕಿಂಗ್ ವ್ಯವಸ್ಥೆಯಡಿ ಸೇವೆ.
- ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ ಸೌಲಭ್ಯ.
- ನೇರವಾದ ಕ್ಲಿಯರಿಂಗ್ ಸೌಲಭ್ಯ.
- ಆದ್ಯತಾರಂಗ ಮತ್ತು ದುರ್ಬಲ ವರ್ಗದವರಿಗೆ ಸಾಲದ ಸೌಲಭ್ಯ.
- ಎ.ಟಿ.ಎಂ. ಸೌಲಭ್ಯವಿರುತ್ತದೆ.
- ನಿವ್ವಳ ಅನುತ್ಪಾದಕ ಸಾಲ 0.00%.

| | | |
|---|---|---|
| ಶ್ರೀ ಬಿ.ಎಮ್ ಮುದರಡ್ಡಿ | ಶ್ರೀ ಎಸ್.ಎನ್. ನಾಡಗೌಡರ | ಶ್ರೀ ಕೆ.ಎಲ್. ಪಾಟೀಲ |
| ಮುಖ್ಯ ಕಾರ್ಯನಿರ್ವಹಣಾಧಿಕಾರಿ | ಉಪಾಧ್ಯಕ್ಷರು | ಅಧ್ಯಕ್ಷರು |

**ಆಡಳಿತ ಮಂಡಳಿ ನಿರ್ದೇಶಕರು**

ಶ್ರೀಯುತ ಎಚ್.ಕೆ.ಪಾಟೀಲ, ಎನ್.ಎಚ್.ಕೋನರಡ್ಡಿ, ವ್ಹಿ.ಡಿ.ಕಾಮರಡ್ಡಿ, ಕೆ.ಬಿ.ನಾಯಿಕ ಎಲ್.ಆರ್.ಉದಪುಡಿ, ಆರ್.ಜಿ.ಬೂದಿಹಾಳ, ಕೆ.ವ್ಹಿ. ಹುಲಕೋಟಿ, ವ್ಹಿ.ಎಚ್. ಬಿದರಿ, ಎಲ್.ವ್ಹಿ. ಸಾವಕಾರ, ಪಿ.ವ್ಹಿ.ಚವ್ವಣ್ಣವರ ಎಚ್.ಎಸ್.ಕೋರಡ್ಡಿ, ಎಸ್.ಆರ್.ಸೋನವಾಲ್ಕರ, ಶ್ರೀಮತಿ ಬಿ.ವ್ಹಿ. ನವಲಗುಂದ, ಶ್ರೀಮತಿ ಎಸ್.ಸಿ. ಹುಚ್ಚಣ್ಣವರ, ಡಿ.ಜಿ. ಜೋಗಣ್ಣವರ್, ಎ.ಎಲ್. ಪೋತ್ನಿಸ್, ಶ್ರೀನಿವಾಸ ದೇವರಡ್ಡಿ.

# ಮುಂದಿನ ದಶಕಗಳು ವಿಷ್ಯಾಕ್ಕೆ ಸೇರಿದ್ದು; ಹೆಜ್ಜೆಯಿಡುವ ಮುನ್ನ ಎಚ್ಚರವಾಗಿರಬೇಕಿದೆ ಭಾರತ



**ಭಾರತ ಇಂದಿಗೆ ಚೀನಾ ಮತ್ತು ಅಮೇರಿಕಾ ಎರಡಕ್ಕೂ ಬೇಕಾಗಿದೆ. ಭಾರತ ಯಾರತ್ತ ಹೆಚ್ಚಿನ ಒಲವು ತೋರುತ್ತದೆ ಎನ್ನುವುದು ಪ್ರಮುಖ ಪಾತ್ರವಹಿಸುತ್ತದೆ. ಅಲ್ಲದೆ ಚೀನಾ ಮತ್ತು ಅಮೇರಿಕಾ ಎರಡೂ ದೇಶಕ್ಕೂ ಭಾರತ ಯಾರೊಂದಿಗೆ ಹೋದರೂ ಸುಮ್ಮನೆ ಅವರ ಬಾಲವಾಗಿ ಕೂರುವ ದೇಶದವಲ್ಲ. ಅದಕ್ಕೆ ಬಹಳ ದೊಡ್ಡ ಪೊಟೆನ್ಷಿಯಲ್ ಇದೆ. ಹೀಗಾಗಿ ಅದು ಇಂದಲ್ಲ ನಾಳೆ ಮತ್ತೆ ನಮಗೆ ಪ್ರತಿಸ್ಪರ್ಧಿಯಾಗಿ ನಿಂತೇ ನಿಲ್ಲುತ್ತದೆ ಎನ್ನುವುದು ಗೊತ್ತಿದೆ. ಇದಕ್ಕೆ ಸಣ್ಣ ಉದಾಹರಣೆ ನೋಡಿ ಗ್ಲೋಬಲ್ ಇನ್ವೆಸ್ಟರ್ಸ್ ಅಥವಾ ಫಾರಿನ್ ಇನ್ಸಿಟ್ಯೂಷನಲ್ ಇನ್ವೆಸ್ಟರ್ಸ್ ಮರಳಿ ಭಾರತದ ಷೇರು ಮಾರುಕಟ್ಟೆಯಲ್ಲಿ ಹಣವನ್ನು ಹೂಡಲು ಶುರು ಮಾಡಿದ್ದಾರೆ. ಅಮೇರಿಕಾ ಮತ್ತು ಚೀನಾದ ನೇರ ಜಟಾಪಟಿ ಸಮಯದಲ್ಲಿ ಭಾರತದಲ್ಲಿ ಹೂಡಿಕೆ ಮಾಡುವುದು ಬೆಸ್ಟ್ ಎನ್ನುವ ನಿರ್ಧಾರಕ್ಕೆ ಅವರು ಬಂದಿದ್ದಾರೆ.**

ಸುಂಕ ಸಮರವನ್ನು ಅಮೇರಿಕಾ ಶುರು ಮಾಡಿತು. ಆದರೆ ಅದು ಅಮೆರಿಕಕ್ಕೆ ತಿರುಗುಬಾಣವಾಗುತ್ತದೆ ಎನ್ನುವ ಅರಿವು ಟ್ರಂಪ್‌ಗೆ ಇರಲಿಲ್ಲವೇ? ಎನ್ನುವುದು ಬಹು ದೊಡ್ಡ ಪ್ರಶ್ನೆ. ವಿಶ್ವಕ್ಕೆ ನಾನು ಇನ್ನೂ ದೊಡ್ಡಣ್ಣ ಎನ್ನುವ ಗತ್ತಿನಿಂದ ಯಾರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದೆ ಒಮ್ಮುಖ ನಿರ್ಧಾರ ತೆಗೆದುಕೊಂಡದ್ದು ಇದೀಗ ಅಮೇರಿಕಾ ಬಹು ದೊಡ್ಡ ಕುಸಿತದ ಹಂತಕ್ಕೆ ಬಂದು ನಿಂತಿದೆ. ಕೇವಲ ವಾರದ ಹಿಂದೆ ಚೀನಾದಿಂದ ಹೊರಟ 80 ಶಿಪ್ಪಿಂಗ್ ಕಂಟೈನರ್ ತೆರೆದಾಗ ಅದು ಖಾಲಿ ಇದ್ದದ್ದು ಅಮೇರಿಕಾ ವ್ಯಾಪಾರಸ್ಥರ ಜಂಘಾಬಲವನ್ನು ಹುಡುಗಿಸಿದೆ. ಚೀನಾ ಸಾಕು ಇನ್ನು ಅಮೇರಿಕಾ ಜೊತೆಗೆ ವ್ಯಾಪಾರ ಬೇಡ ಎಂದು ಮನಸ್ಸು ಮಾಡಿದರೆ ಏನಾಗಬಹುದು ಎನ್ನುವುದನ್ನು ಸ್ವಲ್ಪ ಗಮನಿಸೋಣ.

ಚೀನಾ ತನ್ನ ವಸ್ತುಗಳನ್ನು ಅಮೆರಿಕಾಗೆ ಕಳಿಸುವುದಿಲ್ಲ ಎಂದು ಹಠ ಮಾಡಿಕೊಂಡು ಕುಳಿತರೆ ಅಮೆರಿಕಾದ ದೊಡ್ಡ ಸೂಪರ್‌ಮಾರ್ಕೆಟ್ ಚೈನ್ ವಾಲ್ ಮಾರ್ಟ್‌ನ ಅರ್ಧಕ್ಕಿಂತ ಹೆಚ್ಚಿನ ಶೆಲ್ಫ್‌ಗಳು ಖಾಲಿ ಹೊಡೆಯಲು ಶುರು ಮಾಡುತ್ತವೆ.

ಈಗಾಗಲೇ ಏಷ್ಯನ್ ಮೂಲದ ಜನರಿಗೆ ಬೇಕಾಗುವ ಸಾಮಗ್ರಿಗಳ ಬೆಲೆ ದುಪ್ಪಟ್ಟಾಗಿದೆ. ಮೊದಲೆಲ್ಲಾ 300/400 ಡಾಲರಿಗೆ ತಿಂಗಳ ದಿನಸಿ ಕೊಳ್ಳುತ್ತಿದ್ದ ಕುಟುಂಬ ಇಂದು ಸರಿಸುಮಾರು 800/1000 ಡಾಲರ್ ವ್ಯಯಿಸಬೇಕಾದ ಪರಿಸ್ಥಿತಿ ಉಂಟಾಗಿದೆ. ಲೊಕಾನ್ ಅಮೆರಿಕನ್ ಕುಟುಂಬದ ಕಥೆ ಕೂಡ ಸೇಮ್. ಚೀನಾ ಪೂರ್ಣವಾಗಿ ಅಮೇರಿಕಾ ಜೊತೆಗೆ ವ್ಯಾಪಾರವೇ ಬೇಡ ಎಂದು ಕುಳಿತರೆ ಕೇವಲ ಒಂದು ವಾರದಲ್ಲಿ, ಹೌದು ಸರಿಯಾಗಿ ಓದಿದ್ದರೇ ಕೇವಲ 7 ದಿನದಲ್ಲಿ ಅಮೇರಿಕಾ ವ್ಯವಸ್ಥೆ ಪೂರ್ಣ ಕುಸಿತವನ್ನು ಕಾಣುತ್ತದೆ. ಚೀನಾ ಗತಿಯೇನು?

ಈ ಪ್ರಶ್ನೆ ಕೂಡ ಸಹಜವಾಗಿ ಉದ್ಭವಿಸುತ್ತದೆ. ಚೀನಾ ಕೂಡ 18/20 ದಿನದಲ್ಲಿ ತೀವ್ರ ಕುಸಿತವನ್ನು ಕಾಣುತ್ತದೆ. ಇದು ಚೀನಾಗೆ ಗೊತ್ತಿದೆ. ಈ ಕಾರಣದಿಂದ ಜಿ ಪಿಂಗ್ ಒಮ್ಮೆಲೇ ಅಮೆರಿಕಕ್ಕೆ ಕಳುಹಿಸುತ್ತಿದ್ದ ಪದಾರ್ಥಗಳನ್ನು ತಡೆ ಹಿಡಿದಿಲ್ಲ ಬದಲಿಗೆ ಆತ

ಚಾಣಾಕ್ಷ ನಡೆಯನ್ನು ಇಡುತ್ತಿದ್ದಾರೆ.

ಗಮನಿಸಿ ತೆರಿಗೆ ಹೆಚ್ಚಾದ ಕಾರಣ ಅಮೇರಿಕಾ ವ್ಯಾಪಾರಸ್ಥರು ಪದಾರ್ಥಗಳನ್ನು ಚೀನಾದಿಂದ ಶಿಪ್ ಮಾಡಿಸಿಕೊಳ್ಳಲು ಮೀನಮೇಷ ಎಣಿಸುತ್ತಿದ್ದಾರೆ. ಅಲ್ಲಿನ ವ್ಯಾಪಾರಸ್ಥರು ಟ್ರಂಪ್ ಮೇಲೆ ಒತ್ತಡವನ್ನು ಹೇರುತ್ತಿದ್ದಾರೆ. ಚೀನಾ ಕುಳಿತು ಆಟವನ್ನು ನೋಡುತ್ತಿದೆ. ಏಕೆಂದರೆ ಪದಾರ್ಥ ಶಿಪ್ ಮಾಡಲು ಸಿದ್ದವಾದ 7 ದಿನಗಳಲ್ಲಿ ಪೂರ್ಣ ಹಣವನ್ನು ಪಾವತಿ ಮಾಡಿ ಪದಾರ್ಥವನ್ನು ತೆಗೆದುಕೊಂಡು ಹೋಗಬೇಕು. ಇಲ್ಲದಿದ್ದರೆ ಮುಂಗಡ ಹಣವನ್ನು ವಾಪಸ್ಸು ಕೊಡಲಾಗುವುದಿಲ್ಲ ಎನ್ನುವ ನಿಬಂಧನೆಯನ್ನು ಚೀನಾ ಬಹಳ ಹಿಂದಿನಿಂದ ಪಾಲಿಸಿಕೊಂಡು ಬಂದಿದೆ. ಹೀಗಾಗಿ ಟೈಮ್ ಬಾಂಬ್ ಅಮೆರಿಕಾದ ಮೇಲಿದೆ. ಇದನ್ನು ಬೇಗ ನಿವಾರಿಸಿಕೊಳ್ಳುವ ದರ್ದು ಅಮೇರಿಕಕ್ಕೆ ಹೆಚ್ಚಾಗಿದೆ. ಈ ಮಧ್ಯೆ ಚೀನಾ ಅದ್ಭುತ ದಾಳವನ್ನು ಉರುಳಿಸಿದೆ. 20 ಡಾಲರ್ ಬೆಲೆ ಬಾಳುವ ಪದಾರ್ಥವನ್ನು ನಿಮಗೆ 2000 ಡಾಲರಿಗೆ ಮಾರಿದ್ದಾರೆ ಎನ್ನುವ ಕಹಿಸತ್ಯವನ್ನು ಅಮೇರಿಕಾ ಮತ್ತು ಯೂರೋಪಿನ ಜನತೆಗೆ ತೆರೆದಿಟ್ಟಿದ್ದಾರೆ. ಚೀನಾದ ಬಳಿ ಅಮೇರಿಕಕ್ಕೆ ಎಂದು ತಯಾರಿಸಿದ ಪದಾರ್ಥಗಳ ಸ್ಟಾಕ್ ಬಹಳವಿದೆ. ಹೀಗಾಗಿ ಅವರು ನೇರವಾಗಿ ಸಣ್ಣಪುಟ್ಟ ವ್ಯಾಪರಸ್ಥರು ನಮ್ಮಿಂದ ಈ ಪದಾರ್ಥವನ್ನು ಕೊಳ್ಳಬಹುದು. ಡಾಕ್ಯುಮೆಂಟ್ಸ್ ಮತ್ತು ಪೇಮೆಂಟ್ ಸರಿಯಾದರೆ ಕೇವಲ 6/8 ಗಂಟೆಯಲ್ಲಿ ನಾವು ಪದಾರ್ಥವನ್ನು ನಿಮ್ಮ ಮನೆ ಬಾಗಿಲಿಗೆ ತಲುಪಿಸುತ್ತೇವೆ ಎನ್ನುವ ಮಾತನ್ನು ಕೂಡ ಆಡಿದೆ.

ಮುಂಗಡ ಹಣ 20 ರಿಂದ 50 ಪ್ರತಿಶತದ ವರೆಗೆ ತೆಗೆದುಕೊಂಡಿರುವ ಕಾರಣ ಚೀನಾ ಈಗ ತನ್ನ ಪದಾರ್ಥಗಳನ್ನು ಇನ್ನಷ್ಟು ಕಡಿಮೆ ಬೆಲೆಯಲ್ಲಿ ಮಾರಲು ಸಿದ್ಧವಾಗಿದೆ. ಯೂರೋಪಿನ ವ್ಯಾಪಾರಿಗಳು ನೇರವಾಗಿ ಇಂತಹ ಪದಾರ್ಥವನ್ನು ಚೀನಾದಿಂದ ಕೊಳ್ಳಲು ಶುರು ಮಾಡಿದ್ದಾರೆ. ಅಮೇರಿಕಾ ಯೂರೋಪಿಯನ್ ಯೂನಿಯನ್ ಮತ್ತು ಕೆನಡಾ ದೇಶವನ್ನು ಕೂಡ ಶತ್ರು ದೇಶದಂತೆ ನಡೆಸಿಕೊಂಡದ್ದು ಅವರಿಗೆ ಇಷ್ಟವಾಗಿಲ್ಲ. ಹೀಗಾಗಿ ಈ ದೇಶಗಳು ಚೀನಾದೊಂದಿಗೆ ಖುಷಿಯಿಂದ ವ್ಯಾಪಾರ ಮಾಡಲು ಸಿದ್ಧವಾಗಿವೆ. ನೀವು ಅಚ್ಚರಿ ಪಡುವ ಇನ್ನೊಂದು ವಿಷಯವಿದೆ. ಸ್ವತಃ ಅಮೇರಿಕನ್ ಬಿಸಿನೆಸ್ಮೆನ್‌ಗಳು ಚೀನಾಕ್ಕೆ ಭೇಟಿ ಕೊಟ್ಟು ಬೇರೆ ಒಪ್ಪಂದಗಳನ್ನು ಮಾಡಿಕೊಳ್ಳೋಣ ಎಂದು ಚೀನಾದ ಸಂಸ್ಥೆಗಳ ಜೊತೆಗೆ ಚೌಕಾಸಿಗೆ



ಇಳಿದಿವೆ. ತಾನು ಚೀನಾದ ಮುಂದೆ ಮಂಡಿಯೂರಿದರೆ ಅದು ಜಗತ್ತಿಗೆ ಬೇರೆ ಸಂದೇಶ ನೀಡುತ್ತದೆ ಎಂದು ಟ್ರಂಪ್ ಈ ರೀತಿ ವ್ಯಾಪಾರಸ್ಥರನ್ನು ಮುಂದೆ ಬಿಟ್ಟಿದ್ದಾರೆ ಎನ್ನುವ ಗುಸುಗುಸು ಶುರುವಾಗಿದೆ. ಪರಿಸ್ಥಿತಿ ಈ ತಿರುವು ಪಡೆದುಕೊಳ್ಳುತ್ತಿರುವ ಸಮಯದಲ್ಲಿ ಚೀನಾದ ಅಧ್ಯಕ್ಷ ಜಿ ಪಿಂಗ್ ಜಗತ್ತಿನ ಅರ್ಧ ಜನಸಂಖ್ಯೆ ಏಷ್ಯಾದಲ್ಲಿದೆ. ಚೀನಾ, ಭಾರತ ಮತ್ತು ಬಾಂಗ್ಲಾ ದೇಶ ಒಂದಾದರೆ ಸಾಕು. ನಮ್ಮ ನಡುವೆ 3 ಬಿಲಿಯನ್ ಮೀರಿದ ಜನಸಂಖ್ಯೆಯಿದೆ. ಹೀಗಾಗಿ ನಾವು ಒಂದಾಗಿ ಅಮೆರಿಕಾವನ್ನು ಮಣಿಸಬೇಕಾಗಿದೆ. ಪಾಶ್ಚಾತ್ಯ ದೇಶಗಳ ಮೇಲಾಟ ಇನ್ನು ಮುಗಿದ ಕಥೆ, ಇನ್ನೇನಿದ್ದರೂ ಅದು ಏಷ್ಯಾಕ್ಕೆ ಸೇರಿದ್ದು ಎನ್ನುವ ಮಾತನ್ನು ಆಡಿದ್ದಾರೆ. ಜಿ ಪಿಂಗ್ ಎಲ್ಲಿಯೂ ಚೀನಾಕ್ಕೆ ಸೇರಿದ್ದು ಎನ್ನುವ ಮಾತನ್ನು ಆಡಿಲ್ಲ ಎನ್ನುವುದನ್ನು ಗಮನಿಸಬೇಕು. ಎಲ್ಲೆಡೆ ಅವರು ಏಷ್ಯಾ ಎನ್ನುವ ಪದವನ್ನು ಹೆಚ್ಚು ಬಳಸುತ್ತಿದ್ದಾರೆ.

ನಿಮಗೆಲ್ಲಾ ಗೊತ್ತೇ ಇರುತ್ತದೆ. ಈ ಜಾಗತಿಕ ರಾಜಕೀಯದಲ್ಲಿ ಪ್ರತಿಯೊಂದು ಮಾತು ಮತ್ತು ನಡೆಗಳು ಲಾಭ ಮತ್ತು ನಷ್ಟದ ಮೇಲೆ ನಿಂತಿರುತ್ತದೆ. ಒಂದು ಸಣ್ಣ ನಡವಳಿಕೆಯಲ್ಲಿನ ಬದಲಾವಣೆ ಸಾವಿರಾರು ಕೋಟಿ ರೂಪಾಯಿ ಹಣವನ್ನು ಗಳಿಸಿ ಕೊಡುತ್ತದೆ, ಇಲ್ಲವೇ ಕಳೆಯುತ್ತದೆ. ಸದ್ಯದ ಮಟ್ಟಿಗೆ ಟ್ರಂಪ್ ಅವರ ಉದ್ಧಟತನದ ಮಾತುಗಳು ಅಮೆರಿಕಕ್ಕೆ ನಿತ್ಯವೂ ಸಾವಿರಾರು ಕೋಟಿ ಡಾಲರ್ ನಷ್ಟವನ್ನು ಮಾಡುತ್ತಿದೆ. ಇದನ್ನು ಅವರು ನಿಲ್ಲಿಸದೆ ಹೋದರೆ ತಿಂಗಳಲ್ಲಿ ಅಮೇರಿಕಾ ಹಣಕಾಸು ಕುಸಿತಕ್ಕೆ ಒಳಗಾಗುತ್ತದೆ. ಈಗಾಗಲೇ ಅದು ಬಹಳವಾಗಿ ಆರ್ಥಿಕ ಸಂಕಷ್ಟದಲ್ಲಿದೆ.

ಭಾರತ ಇಂದಿಗೆ ಚೀನಾ ಮತ್ತು ಅಮೇರಿಕಾ ಎರಡಕ್ಕೂ ಬೇಕಾಗಿದೆ.

ಭಾರತ ಯಾರತ್ತ ಹೆಚ್ಚಿನ ಒಲವು ತೋರುತ್ತದೆ ಎನ್ನುವುದು ಪ್ರಮುಖ ಪಾತ್ರವಹಿಸುತ್ತದೆ. ಅಲ್ಲದೆ ಚೀನಾ ಮತ್ತು ಅಮೇರಿಕಾ ಎರಡೂ ದೇಶಕ್ಕೂ ಭಾರತ ಯಾರೊಂದಿಗೆ ಹೋದರೂ ಸುಮ್ಮನೆ ಅವರ ಬಾಲವಾಗಿ ಕೂರುವ ದೇಶದವಲ್ಲ. ಅದಕ್ಕೆ ಬಹಳ ದೊಡ್ಡ ಪೊಟೆನ್ಶಿಯಲ್ ಇದೆ. ಹೀಗಾಗಿ ಅದು ಇಂದಲ್ಲ ನಾಳೆ ಮತ್ತೆ ನಮಗೆ ಪ್ರತಿಸ್ಪರ್ಧಿಯಾಗಿ ನಿಂತೇ ನಿಲ್ಲುತ್ತದೆ ಎನ್ನುವುದು ಗೊತ್ತಿದೆ. ಇದಕ್ಕೆ ಸಣ್ಣ ಉದಾಹರಣೆ ನೋಡಿ ಗ್ಲೋಬಲ್ ಇನ್ವೆಸ್ಟರ್ಸ್ ಅಥವಾ ಫಾರಿನ್ ಇನ್ಸಿಟ್ಯೂಷನಲ್ ಇನ್ವೆಸ್ಟರ್ಸ್ ಮರಳಿ ಭಾರತದ ಷೇರು ಮಾರುಕಟ್ಟೆಯಲ್ಲಿ ಹಣವನ್ನು ಹೂಡಲು ಶುರು ಮಾಡಿದ್ದಾರೆ. ಅಮೇರಿಕಾ ಮತ್ತು ಚೀನಾದ ನೇರ ಜಟಾಪಟಿ ಸಮಯದಲ್ಲಿ ಭಾರತದಲ್ಲಿ ಹೂಡಿಕೆ ಮಾಡುವುದು ಬೆಸ್ಟ್ ಎನ್ನುವ ನಿರ್ಧಾರಕ್ಕೆ ಅವರು ಬಂದಿದ್ದಾರೆ.

ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಅಮೇರಿಕಾ ಮತ್ತು ಚೀನಾ ಎರಡೂ ಭಾರತವನ್ನು ಛಿದ್ರ ಮಾಡಲು ಹವಣಿಸುವುದು ಅಥವಾ ಭಾರತದಲ್ಲಿ ಅರಾಜಕತೆ ಸೃಷ್ಟಿಸುವುದು ಮಾಡುತ್ತವೆ ಎನ್ನುವುದು ಸ್ಪಷ್ಟ. ಏಕೆಂದರೆ ಬಲಿಷ್ಠ ಭಾರತ ಅಮೇರಿಕಾ ಮತ್ತು ಚೀನಾ ಎರಡಕ್ಕೂ ಮುಳ್ಳಾಗುವ ಸಾಧ್ಯತೆಯಿದೆ. ಹೀಗಾಗಿ ಭಾರತದ ನೆಲದಲ್ಲಿ ಅಸ್ಥಿರತೆ ಸೃಷ್ಟಿಸುವುದು, ಭಯ ಉತ್ಪನ್ನ ಮಾಡುವುದು, ಭಾರತ ಮಾತ್ರವಲ್ಲ ಜಗತ್ತಿನೆಲ್ಲೆಡೆ ಎಲ್ಲಿಯೂ ಭದ್ರತೆ ಇಲ್ಲ ಎನ್ನುವ ಪರಿಸ್ಥಿತಿ ಸೃಷ್ಟಿಸುವುದು ಇವರುಗಳ ಹುನ್ನಾರ.

**ಕೊನೆಮಾತು:** ನಾಗರಿಕರಾಗಿ ನಾವು ಈ ರಾಜಕೀಯದಾಟವನ್ನು ಪೂರ್ಣವಾಗಿ ಗ್ರಹಿಸುವ ಅವಶ್ಯಕತೆಯಿದೆ. ಸುಮ್ಮನೆ ಅನ್ನಿಸಿದ್ದನ್ನೆಲ್ಲಾ ಬರೆಯುತ್ತಾ ದ್ವೇಷ, ದಳ್ಳುರಿ ಹೆಚ್ಚಿಸುವ ಬದಲು ತಾಳ್ಮೆಯಿಂದ ಇರಬೇಕಿದೆ. ಸಣ್ಣ ನಿರ್ಧಾರಗಳು ಸಾವಿರಾರು ಕೋಟಿ ರೂಪಾಯಿ ನಷ್ಟವನ್ನು ಮಾಡಬಲ್ಲವು. ಸ್ವಾಭಿಮಾನದ ಮುಂದೆ ದುಡ್ಡು ಮುಖ್ಯವಲ್ಲ ಎನ್ನುವುದು ಸೋಶಿಯಲ್ ಮೀಡಿಯಾದಲ್ಲಿ ಸುಲಭ. ನಿಜ ಜೀವನ ಬೇರೆಯಿದೆ.

# ಏಪ್ರಿಲ್‌ನಲ್ಲಿ ಚಿಲ್ಲರೆ ಹಣದುಬ್ಬರ ಶೇ.3.16ಕ್ಕೆ ಇಳಿಕೆ ; 69 ತಿಂಗಳಲ್ಲೇ ಅತಿಕಡಿಮೆ

**ಮುಂಬೈ:** ಭಾರತದ ಚಿಲ್ಲರೆ ಹಣದುಬ್ಬರವು ಏಪ್ರಿಲ್ 2025 ರಲ್ಲಿ ಶೇ.3.16ಕ್ಕೆ ಇಳಿದಿದ್ದು, ಇದು ಕಳೆದ 69 ತಿಂಗಳಲ್ಲೇ ಅತ್ಯಂತ ಕನಿಷ್ಠ ಹಣದುಬ್ಬರವಾಗಿದೆ. ಮುಖ್ಯವಾಗಿ ತರಕಾರಿ ಬೆಲೆಗಳಲ್ಲಿನ ನಿರಂತರ ಕುಸಿತದಿಂದಾಗಿ ಚಿಲ್ಲರೆ ಹಣದುಬ್ಬರ ಕಳೆದ ಆರು ವರ್ಷಗಳಲ್ಲೇ ಕನಿಷ್ಠ ಮಟ್ಟಕ್ಕೆ ತಲುಪಿದೆ ಎಂದು ಅಂಕಿಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ ಬಿಡುಗಡೆ ಮಾಡಿದ ಇತ್ತೀಚಿನ ಗ್ರಾಹಕ ಬೆಲೆ ಸೂಚ್ಯಂಕ **(CPI)** ತಿಳಿಸಿದೆ.



ಮಾರ್ಚ್‌ನಲ್ಲಿ ಚಿಲ್ಲರೆ ಹಣದುಬ್ಬರ ಶೇ. 3.34ರಷ್ಟು ಇತ್ತು, ಅದೀಗ ಏಪ್ರಿಲ್‌ನಲ್ಲಿ ಶೇ.3.16ಕ್ಕೆ ಇಳಿದಿದೆ. ಇದಕ್ಕೂ ಹಿಂದಿನ ತಿಂಗಳು ಅಂದರೆ ಫೆಬ್ರವರಿಯಲ್ಲಿ ಚಿಲ್ಲರೆ ಹಣದುಬ್ಬರ ಶೇ.3.79ರಷ್ಟಿತ್ತು. ಇದರೊಂದಿಗೆ ಸತತ ಮೂರನೇ ತಿಂಗಳೂ ಹಣದುಬ್ಬರ ಶೇ. 4ಕ್ಕಿಂತ ಕೆಳಮಟ್ಟಕ್ಕೆ ಇಳಿಕೆ ಕಂಡಂತಾಗಿದೆ. ಈ ಮೂಲಕ ಆರ್‌ಬಿಐನ ಶೇ. 4ರ ಒಳಗಿನ ಗುರಿ ತಲುಪಿದೆ. "ತರಕಾರಿ ಸೂಚ್ಯಂಕವು ಮತ್ತಷ್ಟು ಕುಸಿದು, ಆಹಾರ ಹಣದುಬ್ಬರವನ್ನು ಕುಗ್ಗಿಸುವುದರೊಂದಿಗೆ, ಮುಖ್ಯ CPI ಹಣದುಬ್ಬರವು ಏಪ್ರಿಲ್ 2025ರಲ್ಲಿ 69 ತಿಂಗಳ ಕನಿಷ್ಠ ಅಂದರೆ ಶೇ.3.16ಕ್ಕೆ ಇಳಿದಿದೆ" ಎಂದು ICRA ಲಿಮಿಟೆಡ್‌ನ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ತಿಳಿಸಿದ್ದಾರೆ.

ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ)ದಲ್ಲಿ ಸುಮಾರು ಅರ್ಧದಷ್ಟು ಪಾಲನ್ನು ಹೊಂದಿರುವ ಆಹಾರ ಹಣದುಬ್ಬರವು ಏಪ್ರಿಲ್‌ನಲ್ಲಿ ಶೇ.1.78ಕ್ಕೆ ಇಳಿಕೆಯಾಗಿದೆ. ಇದೇ ಹಣದುಬ್ಬರ ಮಾರ್ಚ್‌ನಲ್ಲಿ ಶೇ.2.69ರಷ್ಟು ಇತ್ತು. ಇದರಿಂದ ಒಟ್ಟಾರೆ ಹಣದುಬ್ಬರ ಕುಸಿತ ಕಂಡಿದೆ.

**GA Genius Financial Services**
*Passion to Perfection*

(Formerly known as Genius Investment Advisors Private Limited)

**AMFI-REGISTERED MUTUAL FUND DISTRIBUTOR**

## Why invest in Mutual Funds ?

- Low Cost
- Professional Management
- Transparency
- Convenient (Invest Small Amounts)
- Risk Diversification
- Liquidity
- Well-Regulated By SEBI



## Debt Funds

- Invest in different types of fixed income securities
- Aim to earn interest income and capital appreciation
- Suitable for investors seeking returns with low or moderate risk

SCAN FOR LOCATION

# 159/3, 2nd Main Road, Chamarajpet, Bengaluru - 560018
+91 9916132403 +91 9886078661

**Disclaimer :** All Mutual Funds carry market risks; read scheme related documents before investing; past performance doesn't guarantee future returns. This is not an advertisement. The information provided is for educational purposes only and should not be considered investment advice.

**Source :** AMFIIndia.com - Investor Awareness Presentation

# ಹಣಕಾಸು ನಿರ್ವಹಣೆ : ಮಹಿಳೆಯರ ಎಚ್ಚರ ಅಗತ್ಯ

**ನಿವೃತ್ತಿ ನಂತರದ ಆದಾಯ, ಮಕ್ಕಳ ಶಿಕ್ಷಣ ಮುಂತಾಗಿ ನಿರ್ದಿಷ್ಟ ಗುರಿ ಇಟ್ಟುಕೊಂಡು ಹೂಡಿಕೆ ಮಾಡುವಲ್ಲಿ ಮಹಿಳೆಯರು ಪುರುಷರಿಗಿಂತ ಹೆಚ್ಚು ಸಮರ್ಥರು. ತಾವು ಮಾಡಿದ ಹೂಡಿಕೆಯ ಗರಿಷ್ಠ ಲಾಭ ಪಡೆಯುವಲ್ಲಿ ಅವರು ಯಶಸ್ವಿಯಾಗುತ್ತಾರೆ. ಪುರುಷರು ತಮ್ಮ ಹಣ ಬೇಗ ವೃದ್ಧಿಯಾಗಬೇಕೆಂಬ ಭಾವನೆಯಿಂದ ಚಂಚಲರಾಗಿ ಹೂಡಿಕೆಯಲ್ಲಿ ಬದಲಾವಣೆ ಮಾಡುತ್ತಲೇ ಇರುತ್ತಾರೆ. ಅದರಿಂದಾಗಿ ಹೂಡಿಕೆಗೆ ನಿರೀಕ್ಷಿತ ಆದಾಯ ಬಂದೇ ಬರುತ್ತದೆ ಎಂಬ ಭರವಸೆ ಇರುವುದಿಲ್ಲ.**



ವೈಯಕ್ತಿಕ ಹಣಕಾಸು ನಿರ್ವಹಣೆ ವಿಚಾರದಲ್ಲಿ ಪುರುಷರು ವಹಿಸುವಷ್ಟು ಆಸಕ್ತಿಯನ್ನು ಮಹಿಳೆಯರು ವಹಿಸುವುದಿಲ್ಲ ಎಂಬುದು ಭಾರತಕ್ಕಷ್ಟೇ ಸೀಮಿತ ವಿಚಾರವಲ್ಲ, ಅದು ಜಾಗತಿಕ ಸತ್ಯವೂ ಹೌದು. ಭಾರತದಲ್ಲಂತೂ ವೈಯಕ್ತಿಕ ಹಣಕಾಸು ನಿರ್ವಹಣೆಯಲ್ಲಿ ಮಹಿಳೆಯರ ಆಸಕ್ತಿ ಅತಿ ಕಡಿಮೆ. ಮ್ಯೂಚುವಲ್ ಫಂಡ್ ಇರಲಿ, ಷೇರು ಪೇಟೆ ಹೂಡಿಕೆ ಇರಲಿ ಅಥವಾ ಜೀವ ವಿಮಾ ಕ್ಷೇತ್ರದ ಹೂಡಿಕೆಯೇ ಇರಲಿ ಮಹಿಳೆಯರ ಪಾಲು ಶೇ 25ಕ್ಕೂ ಕಡಿಮೆ ಇದೆ. ನಮ್ಮಲ್ಲಿ ಕುಟುಂಬ ನಿರ್ವಹಣೆಗೆ ಬೇಕಾದ ಹಣ ಸಂಪಾದಿಸುವ ಹೊಣೆಯನ್ನು ಬಹುಪಾಲು ಪುರುಷರೇ ಹೊತ್ತಿದ್ದಾರೆ. ಇದು ಪಾರಂಪರಿಕವಾಗಿ ಬಂದಿರುವ ವ್ಯವಸ್ಥೆ. ಕುಟುಂಬದ ಹಣಕಾಸಿನ ನಿರ್ವಹಣೆಯ ಜವಾಬ್ದಾರಿಯನ್ನೂ ಅವರೇ ಹೊತ್ತಿರುತ್ತಾರೆ. ಇದರ ಪರಿಣಾಮ ಎಂಬಂತೆ ನಮ್ಮಲ್ಲಿ ವೈಯಕ್ತಿಕ ಹಣಕಾಸು ನಿರ್ವಹಣೆಯಲ್ಲಿ ಮಹಿಳೆಯರ ಪಾತ್ರ ತೀರ ಕಡಿಮೆ ಇದೆ.

ಪರೋಕ್ಷವಾಗಿ ಹೇಳುವುದಾದರೆ, ಹಣಕಾಸು ನಿರ್ವಹಣೆಯಲ್ಲಿ ಮಹಿಳೆಯರು ಹೆಚ್ಚು ಮುತುವರ್ಜಿವಹಿಸುವುದಿಲ್ಲ, ಅವರು ಅಷ್ಟು ಸಮರ್ಥರಲ್ಲ ಎಂದು ಪುರುಷರು ಭಾವಿಸಿರುವಂತಿದೆ. ಆದರೆ, ಇಂದು ಭಾರತದ ಸರ್ಕಾರಿ ಸ್ವಾಮ್ಯದ ಕ್ಷೇತ್ರದ ಐದು ಪ್ರಮುಖ ಬ್ಯಾಂಕ್‌ಗಳಲ್ಲಿ ಮೂರು ಬ್ಯಾಂಕ್‌ಗಳ ಮುಖ್ಯಸ್ಥರು ಮಹಿಳೆಯರು ಎಂಬುದನ್ನು ಮರೆಯುವಂತಿಲ್ಲ.

ವೈಯಕ್ತಿಕ ಹಣಕಾಸು ನಿರ್ವಹಣೆ ಕುರಿತಂತೆ ಮಹಿಳೆ ಮತ್ತು ಪುರುಷರ ಬಗ್ಗೆ ನಡೆಸಿದ ಅಧ್ಯಯನ ಕೆಲವು ಆಸಕ್ತಿದಾಯಕ ಸಂಗತಿಗಳನ್ನು ಬಯಲು ಮಾಡಿದೆ. ಅದರಲ್ಲಿ ಒಂದು ಪ್ರಮುಖ ಅಂಶವೆಂದರೆ ಹಣ ಹೂಡಿಕೆ ವಿಚಾರದಲ್ಲಿ ಮಹಿಳೆಯರು ಹೆಚ್ಚು ಎಚ್ಚರ ವಹಿಸುತ್ತಾರೆ. ಪಾರಂಪರಿಕ ಶೈಲಿಯ (ಕಡಿಮೆ ಅಪಾಯದ) ಹೂಡಿಕೆಯಲ್ಲೇ ಮಹಿಳೆಯರು ಹೆಚ್ಚು ಆಸಕ್ತಿ ತೋರಿಸುತ್ತಾರೆ ಎಂಬುದು.

ಮಹಿಳೆಯರು ಗೃಹಕೃತ್ಯಗಳಿಗೆ ಹೆಚ್ಚು ಗಮನ ನೀಡುವುದರಿಂದ ಹಣಕಾಸು ನಿರ್ವಹಣೆ ವಿಚಾರದಲ್ಲಿ ಪುರುಷರಿಗೆ ಹೋಲಿಸಿದರೆ ಮಹಿಳೆಯರಿಗೆ ಸ್ವಲ್ಪ ಜ್ಞಾನ ಕಡಿಮೆ ಇರುವುದು ನಿಜವಾದರೂ, ಕೆಲವರಿಗೆ ಹೆಚ್ಚಿನ ಜ್ಞಾನ ಇದ್ದರೂ ಅವರು ಅದನ್ನೂ ಕಡಿಮೆ ಎಂದೇ ಭಾವಿಸಿರುತ್ತಾರೆ.

ಆದ್ದರಿಂದ ಅವರು ಹೂಡಿಕೆಗೂ ಮುನ್ನ ಎರಡೆರಡು ಬಾರಿ ಯೋಚಿಸುತ್ತಾರೆ. ಆದರೆ ಪುರುಷರು ಕಡಿಮೆ ಜ್ಞಾನ ಹೊಂದಿದ್ದರೂ ತಮ್ಮಲ್ಲಿ ಹೆಚ್ಚಿನ ಜ್ಞಾನ ಇದೆ ಎಂದೇ ಭಾವಿಸಿರುತ್ತಾರೆ. ಇಬ್ಬರೂ ಕುಳಿತು ಈ ಬಗ್ಗೆ ಚರ್ಚೆ ನಡೆಸಿದರೆ ಈ ಕೊರತೆಯನ್ನು ನೀಗಿಸಬಹುದು.

ಮಹಿಳೆಯರ ಹಣ ಹೂಡಿಕೆಯ ವಿಧಾನವೇ ದೀರ್ಘಾವಧಿಯಲ್ಲಿ ಹೆಚ್ಚಿನ ಆದಾಯ ತಂದುಕೊಡುತ್ತದೆ ಎಂಬುದು ಅಧ್ಯಯನದಿಂದ ತಿಳಿದುಬಂದಿದೆ. ಪುರುಷ ಮತ್ತು ಮಹಿಳಾ ಹೂಡಿಕೆದಾರರಲ್ಲಿ

ಇನ್ನೂ ಎರಡು ಆಸಕ್ತಿದಾಯಕ ವ್ಯತ್ಯಾಸಗಳಿವೆ.

ನಿವೃತ್ತಿ ನಂತರದ ಆದಾಯ, ಮಕ್ಕಳ ಶಿಕ್ಷಣ ಮುಂತಾಗಿ ನಿರ್ದಿಷ್ಟ ಗುರಿ ಇಟ್ಟುಕೊಂಡು ಹೂಡಿಕೆ ಮಾಡುವಲ್ಲಿ ಮಹಿಳೆಯರು ಪುರುಷರಿಗಿಂತ ಹೆಚ್ಚು ಸಮರ್ಥರು. ತಾವು ಮಾಡಿದ ಹೂಡಿಕೆಯ ಗರಿಷ್ಠ ಲಾಭ ಪಡೆಯುವಲ್ಲಿ ಅವರು ಯಶಸ್ವಿಯಾಗುತ್ತಾರೆ. ಪುರುಷರು ತಮ್ಮ ಹಣ ಬೇಗ ವೃದ್ಧಿಯಾಗಬೇಕೆಂಬ ಭಾವನೆಯಿಂದ ಚಂಚಲರಾಗಿ ಹೂಡಿಕೆಯಲ್ಲಿ ಬದಲಾವಣೆ ಮಾಡುತ್ತಲೇ ಇರುತ್ತಾರೆ. ಅದರಿಂದಾಗಿ ಹೂಡಿಕೆಗೆ ನಿರೀಕ್ಷಿತ ಆದಾಯ ಬಂದೇ ಬರುತ್ತದೆ ಎಂಬ ಭರವಸೆ ಇರುವುದಿಲ್ಲ.

ಹೂಡಿಕೆ ವಿಚಾರದಲ್ಲಿ ಮಹಿಳೆಗೆ ಪುರುಷರಿಗಿಂತ ಭಿನ್ನವಾದ ದೃಷ್ಟಿಕೋನವಿರುತ್ತದೆ ಎಂಬುದು ನಿಜ. ಆದರೆ, ತಮ್ಮ ಹಣದ ನಿರ್ವಹಣೆ ವಿಚಾರದಲ್ಲಿ ಮಹಿಳೆಯರು ತಿಳಿದಿರಲೇ ಬೇಕಾದ ಕೆಲವು ವಿಚಾರಗಳಿವೆ. ತನ್ನ ವಯಸ್ಸು, ಕೌಟುಂಬಿಕ ಸ್ಥಾನಮಾನಗಳೇನೇ ಇರಬಹುದು, ಆರ್ಥಿಕ ಭದ್ರತೆ ಇದ್ದರೆ ಮಾತ್ರ ತಾನು ಸಂಪೂರ್ಣ ಸ್ವತಂತ್ರಳು ಎಂಬುದನ್ನು ಮಹಿಳೆ ಮೊದಲು ಮನವರಿಕೆ ಮಾಡಿಕೊಳ್ಳಬೇಕು. ಆದ್ದರಿಂದ ಕೆಲವು ಪ್ರಾಥಮಿಕ ಕ್ಷೇತ್ರಗಳಲ್ಲಿ ಹೂಡಿಕೆ ಮಾಡುವುದು ಅಥವಾ ಇಂಥ ವಿಚಾರಗಳ ಬಗ್ಗೆ ಸ್ಪಷ್ಟ ಮಾಹಿತಿ ಹೊಂದಿರುವುದು ಮಹಿಳೆಗೆ ಕಡ್ಡಾಯವೇ ವಿನಾ ಆಯ್ಕೆ ಅಲ್ಲ.

ಕುಟುಂಬದ ಆಸ್ತಿ, ಬ್ಯಾಂಕ್ ಖಾತೆಗಳು, ಲಾಕರ್, ಷೇರು ಹೂಡಿಕೆ ಖಾತೆ, ಪಿಪಿಎಫ್, ಮ್ಯೂಚುವಲ್ ಫಂಡ್ ಮುಂತಾದವು ಜಂಟಿ ಖಾತೆಯಲ್ಲಿರುವಂತೆ ಮಹಿಳೆ ಎಚ್ಚರವಹಿಸಬೇಕು ಅಥವಾ ಈ ಎಲ್ಲ ಕಡೆ ಸರಿಯಾದ ನಾಮನಿರ್ದೇಶನವಾಗಿದೆ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕು. ಇಂದಿನ ಡಿಜಿಟಲ್ ಯುಗದಲ್ಲಿ 'ಪಾಸ್‌ವರ್ಡ್'ಗಳ ಮೂಲಕವೇ ವ್ಯವಹಾರಗಳು ನಡೆಯುತ್ತಿರುವುದರಿಂದ ಪತಿ-ಪತ್ನಿ ಇಬ್ಬರೂ ಪರಸ್ಪರರ ಖಾತೆಗಳ ಪಾಸ್‌ವರ್ಡ್‌ಗಳನ್ನು ಅರಿತಿರುವುದು ಅಗತ್ಯ. ತಮ್ಮ ಆಸ್ತಿಪಾಸ್ತಿ, ಹೂಡಿಕೆ, ಪಾಸ್‌ವರ್ಡ್ ಮುಂತಾದ ವಿಚಾರಗಳ ಬಗ್ಗೆ ಸರಿಯಾದ ಲಿಖಿತ ಮಾಹಿತಿಯನ್ನು ಇಬ್ಬರೂ ಇಟ್ಟುಕೊಂಡಿರಬೇಕು.





ಇನ್ನೊಂದು ಮುಖ್ಯ ಅಂಶ ಏನೆಂದರೆ, ಕುಟುಂಬದಲ್ಲಿ ಆದಾಯ ಇರುವ ಪ್ರತಿಯೊಬ್ಬರೂ ತಮ್ಮ ಹೆಸರಿನಲ್ಲೇ ಜೀವ ವಿಮೆ ಮಾಡಿಸಿಕೊಳ್ಳಬೇಕು. ಉದ್ಯೋಗಸ್ಥ ಮಹಿಳೆಯರಿಗೆ ಪುರುಷರಿಗಿಂತ ಕಡಿಮೆ ವೆಚ್ಚದಲ್ಲಿ ಪಾಲಿಸಿಗಳು ಲಭ್ಯವಾಗುತ್ತಿವೆ ಎಂಬುದೂ ಇಲ್ಲಿ ಗಮನಾರ್ಹ.

ಪುರುಷ ಮತ್ತು ಮಹಿಳಾ ಹೂಡಿಕೆದಾರರ ಯೋಚನಾ ಲಹರಿಯಲ್ಲಿ ವ್ಯತ್ಯಾಸ ಇರುವುದರಿಂದ ಹೂಡಿಕೆಗೂ ಮೊದಲು ಪತಿ-ಪತ್ನಿಯರು ಒಮ್ಮೆ ಆ ವಿಚಾರವಾಗಿ ಚರ್ಚಿಸುವುದು ಹೆಚ್ಚು ಸೂಕ್ತ. ಮಹಿಳೆ ತನ್ನ ಕುಟುಂಬದ ಗುರಿಯನ್ನು ನಿರ್ಧರಿಸಿಕೊಂಡು ಅದಕ್ಕೆ ಅನುಗುಣವಾಗಿ ಹೂಡಿಕೆಗೆ ಸಲಹೆ ನೀಡಬಲ್ಲಳು. ಹೆಚ್ಚಿನ ಆದಾಯದ ಆಮಿಷದಿಂದ ಹೆಚ್ಚು ಪ್ರಮಾಣದ ರಿಸ್ಕ್ ತೆಗೆದುಕೊಳ್ಳುವ ಪುರುಷರ ಯೋಚನಾ ಲಹರಿಗೂ ಇದರಿಂದ ಕಡಿವಾಣ ಹಾಕಲು ಸಾಧ್ಯ. ಕುಟುಂಬದ ಹಣ ನಿರ್ವಹಣೆಯಲ್ಲಿ ಮಹಿಳೆಯೂ ಪುರುಷರಷ್ಟೇ ಆಸಕ್ತಿ ವಹಿಸಿದರೆ ಕುಟುಂಬದ ಒಟ್ಟಾರೆ ಆರ್ಥಿಕ ಸ್ಥಿತಿ ಪ್ರತಿಯೊಬ್ಬರಿಗೂ ತಿಳಿದಿರುತ್ತದೆ. ಇದರಿಂದ ತಮ್ಮ ಆರ್ಥಿಕ ಸ್ಥಿತಿಗತಿಗೆ ಅನುಗುಣವಾಗಿ ವೆಚ್ಚವನ್ನು ನಿಯಂತ್ರಿಸುವ ಜವಾಬ್ದಾರಿ ಪ್ರತಿಯೊಬ್ಬರಲ್ಲೂ ಮೂಡುತ್ತದೆ. ಒಂದು ಕುಟುಂಬದ ಸುಸ್ಥಿರ ಅಭಿವೃದ್ಧಿಗೆ ಇದು ಮೂಲಮಂತ್ರ.

## ರಾಜ್ಯದ ಅತ್ಯುತ್ತಮ ಪಟ್ಟಣ ಸಹಕಾರ ಬ್ಯಾಂಕು ಎಂಬ ಹೆಗ್ಗಳಿಕೆ

### ತಂತ್ರಜ್ಞಾನ ಆಧಾರಿತ ಸೇವೆ, ಸದಸ್ಯರಿಗೆ ನೆರವು : ನಾಲ್ಕು ದಶಕಗಳ ಸಂತೃಪ್ತ ಸೇವೆಯಲ್ಲಿ

# ಬೆಂಗಳೂರಿನ ಆನಂದ ಕೋ-ಆಪರೇಟಿವ್ ಬ್ಯಾಂಕ್



**ಕರ್ನಾಟಕವು ಸಹಕಾರ ಚಳವಳಿಯಲ್ಲಿ ರಾಷ್ಟ್ರದಲ್ಲೇ ಮುಂಚೂಣಿಯಲ್ಲಿದೆ. ನಮ್ಮ ರಾಜ್ಯದಲ್ಲಿ ಪ್ರಸ್ತುತ ಸುಮಾರು 46 ಸಾವಿರ ವಿವಿಧ ರೀತಿಯ ಸಹಕಾರ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳ ಉತ್ತಮ ಕಾರ್ಯನಿರ್ವಹಣೆ ಸಹಕಾರ ಚಳವಳಿಯ ಬೆಳವಣಿಗೆಗೆ ಪೂರಕವಾಗಿದೆ. ಪಟ್ಟಣ ಸಹಕಾರ ಬ್ಯಾಂಕುಗಳ ವಲಯ ಪಟ್ಟಣ ಪ್ರದೇಶದ ಜನರಿಗೆ ಆರ್ಥಿಕವಾಗಿ ಅಗತ್ಯವಿರುವ ಸೌಲಭ್ಯಗಳನ್ನು ಕಲ್ಪಿಸುವಲ್ಲಿ ಯಶಸ್ವಿಯಾಗಿದ್ದು, ಇವುಗಳ ಮೂಲ ಆಶಯ ಪಟ್ಟಣ ಪ್ರದೇಶದ ಅಬಲವರ್ಗದವರಿಗೆ ಅಗತ್ಯವಿರುವ ಹಣಕಾಸಿನ ನೆರವನ್ನು ನೀಡುವುದಾಗಿದೆ. ನಮ್ಮ ರಾಜ್ಯದಲ್ಲಿ ಈಗಾಗಲೇ 251 ಪಟ್ಟಣ ಸಹಕಾರ ಬ್ಯಾಂಕುಗಳು ಕಾರ್ಯನಿರ್ವಹಿಸುತ್ತಿವೆ. ಈ ಬ್ಯಾಂಕುಗಳಲ್ಲಿ 'ಬೆಂಗಳೂರಿನ ಆನಂದ ಕೋ ಆಪರೇಟಿವ್ ಬ್ಯಾಂಕ್' ಸಹ ಉತ್ತಮ ಖ್ಯಾತಿ ಪಡೆದಿದ್ದು, ಗ್ರಾಹಕರ ಪ್ರೀತಿ, ವಿಶ್ವಾಸಕ್ಕೆ ಪಾತ್ರವಾಗುವ ಮೂಲಕ 46 ವರ್ಷಗಳ ಸುದೀರ್ಘ ಸೇವೆಯಲ್ಲಿ ಮುಂಚೂಣಿಯಲ್ಲಿದ್ದು ಯಶಸ್ವಿಯಾಗಿ, ಪ್ರಗತಿಯ ಪಥದಲ್ಲಿ ಮುನ್ನಡೆಯುತ್ತಾ ಸಹಕಾರ ಚಳವಳಿಯ ಬೆಳವಣಿಗೆಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿದೆ.**

**ಬ್ಯಾಂಕಿನ ಪ್ರಾರಂಭ :** 1979ರಲ್ಲಿ ಉತ್ಸಾಹಿ ಸ್ನೇಹಿತರ ಗುಂಪೊಂದು ಒಟ್ಟುಗೂಡಿತು ಮತ್ತು ಬೆಂಗಳೂರಿನ ಅತ್ಯಂತ ಹಳೆಯ ವಿಸ್ತರಣೆಗಳಲ್ಲಿ ಒಂದಾದ ಶೇಷಾದ್ರಿಪುರಂನಲ್ಲಿ ಸಹಕಾರಿ ಬ್ಯಾಂಕಿನ ಅವಶ್ಯಕತೆಯ ಬಗ್ಗೆ ಯೋಚಿಸಿ, ಸರ್ಕಾರಿ ಅಧಿಕಾರಿಗಳು ಮತ್ತು ಸಹಕಾರಿ ಚಿಂತಕರನ್ನು ಒಳಗೊಂಡ ಗುಂಪು ಬ್ಯಾಂಕಿನ ಸ್ಥಾಪನೆಗೆ ಒಂದು ನಿರ್ದಿಷ್ಟ ರೂಪವನ್ನು ನೀಡಿತು. ಇದರ ಪ್ರತಿಫಲ 1989 ರಲ್ಲಿ 'ಆನಂದ ಸಹಕಾರಿ ಬ್ಯಾಂಕ್ ಲಿಮಿಟೆಡ್' ಎಂಬ ಹೆಸರಿನಲ್ಲಿ ಬ್ಯಾಂಕ್ ಹೊರಹೊಮ್ಮಿತು.

ಬ್ಯಾಂಕಿನ ಪ್ರಮುಖ ಪ್ರವರ್ತಕರಾಗಿದ್ದವರು ಪುಟ್ಟಸ್ವಾಮಿ ಎಸ್., ಡಾ. ಶಿವಲಿಂಗಯ್ಯ ಎಲ್., ಡಾ. ಎನ್.ಟಿ. ಮೋಹನ್, ಜಯಪ್ರಕಾಶನಾರಾಯಣ ಎಂ.ಎಚ್., ನಂಜುಂಡಸ್ವಾಮಿ ಪಿ.ಎಲ್., ಆದಿನಾರಾಯಣ ಸಿ.ಡಿ., ಗುರಪ್ಪಾಜಿ ಎಸ್., ಕುಬೇರಪ್ಪ ಎ.ಡಿ., ಶಿವಸ್ವಾಮಿ ಎಚ್. ಎಸ್., ಗೋಪಾಲಯ್ಯ ಬಿ., ನಂಜಯ್ಯ ಡಿ. ಆರ್., ನಂಜಯ್ಯ ಎಸ್., ಕೆಂಪಸಿದ್ದಯ್ಯ ಎಂ.ಕೆ., ಜಯಶಂಕರ್ ಕೆ. ಎಲ್., ದೊಡ್ಡವೀರಯ್ಯ. ಇವರುಗಳಾಗಿದ್ದು, ಈ ಸಹಕಾರಿಗಳ ಪರಿಶ್ರಮದಿಂದಾಗಿ ಇಂದು ಬ್ಯಾಂಕು ಈ ಮಟ್ಟಕ್ಕೆ ಬೆಳೆದಿದೆ. ಉಳಿತಾಯದ ಹವ್ಯಾಸ ಹೊಂದಿರುವ ಕೆಳ ಮತ್ತು ಮಧ್ಯಮ ವರ್ಗದ ಜನರ ಬ್ಯಾಂಕಿಂಗ್ ಅಗತ್ಯಗಳನ್ನು ಪ್ರೋತ್ಸಾಹಿಸಲು ಮತ್ತು ಅರ್ಹ ಸದಸ್ಯರಿಗೆ ಹಣಕಾಸಿನ ನೆರವು ಸೌಲಭ್ಯಗಳನ್ನು ಒದಗಿಸಲು ಮತ್ತು ಎಲ್ಲಾ ಸಮುದಾಯಗಳಿಗೆ ತೆರೆದಿರುವ ಖಾಸಗಿ ಹಣ ಸಾಲಗಾರರ ಹಿಡಿತದಿಂದ ಅವರನ್ನು ಮುಕ್ತಗೊಳಿಸುವ ಉದ್ದೇಶದೊಂದಿಗೆ ಬ್ಯಾಂಕು ಕಾರ್ಯನಿರ್ವಹಿಸುತ್ತಿದೆ. ಪ್ರಸ್ತುತ ಬ್ಯಾಂಕು ಬೆಂಗಳೂರು ನಗರದಲ್ಲಿ ಮೂರು ಶಾಖೆಗಳನ್ನು ಹೊಂದಿದೆ.

ಬ್ಯಾಂಕ್ ಎಲ್ಲಾ ನಿಯಂತ್ರಕರ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದೆ. ಆರಂಭದಿಂದಲು ಅತ್ಯುತ್ತಮ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿದೆ. ಬ್ಯಾಂಕಿನ ಶಿಸ್ತುಬದ್ಧ ಕಾರ್ಯನಿರ್ವಹಣೆ ಮತ್ತು ಬ್ಯಾಂಕಿನ ಕಾರ್ಯವ್ಯಾಪ್ತಿ, ಎಲ್ಲಾ ಕ್ಷೇತ್ರಗಳಲ್ಲಿ ಕಾಲಕಾಲಕ್ಕೆ ಸಿಬ್ಬಂದಿಯ ದಕ್ಷತೆಯುಳ್ಳ ಸೇವೆಗಳನ್ನು ಹಾಗೂ ಆಡಳಿತ ಮಂಡಳಿಯ ಉತ್ತಮ ಮಾರ್ಗದರ್ಶನವನ್ನು ಕಾಣಬಹುದಾಗಿದೆ. ಬ್ಯಾಂಕು ಈಗಾಗಲೇ ತಂತ್ರಜ್ಞಾನ ಆಧಾರಿತವಾದ ಉತ್ತಮ ಬ್ಯಾಂಕಿಂಗ್ ಸೌಲಭ್ಯಗಳನ್ನು ಒದಗಿಸುವಲ್ಲಿ ಯಶಸ್ವಿಯಾಗಿದೆ.

**ಬ್ಯಾಂಕಿನ ಸೇವೆಗಳು:** ಬ್ಯಾಂಕಿನ ವ್ಯವಹಾರಗಳನ್ನು ಕೋರ್ ಬ್ಯಾಂಕಿಂಗ್ ವ್ಯವಸ್ಥೆ, Any Branch Banking ಸೇವೆ, ಎಸ್‌ಎಂಎಸ್ ಬ್ಯಾಂಕಿಂಗ್ ಸೇವೆ,

ವ್ಯಾಪಾರಸ್ಥ ಗ್ರಾಹಕರಿಗೆ ಪಿಓಎಸ್ ಸೇವೆ, ಆರ್‌ಟಿಜಿಎಸ್ ಮೂಲಕ ಹಣ ವರ್ಗಾವಣೆ ಸೇವೆ, ಕನಿಷ್ಠ ಕಮಿಷನ್ ದರದಲ್ಲಿ ಡಿಡಿ, ಪೇ ಆರ್ಡರ್ ಸೇವೆ, ಹಿರಿಯ ನಾಗರಿಕರಿಗೆ ಉಚಿತ ಚೆಕ್ ಪುಸ್ತಕ ಮತ್ತು ಡಿಡಿ ಸೌಲಭ್ಯ, ರೂಪೇ, ಎಟಿಎಂ ಕಾರ್ಡ್ ಸೌಲಭ್ಯವನ್ನು ಒದಗಿಸಲಾಗಿದೆ.

**ಪ್ರಶಸ್ತಿಗಳು:** ಬ್ಯಾಂಕಿನ ಸಾಧನೆಯನ್ನು ಗುರುತಿಸಿ, ಅಖಿಲ ಭಾರತ ಸಹಕಾರ ಸಪ್ತಾಹದ ಸಂದರ್ಭದಲ್ಲಿ ಉತ್ತಮ ಪಟ್ಟಣ ಸಹಕಾರ ಬ್ಯಾಂಕೆಂಬ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

**ಬ್ಯಾಂಕಿನ ಮುಂದಿನ ಯೋಜನೆಗಳು:** ಬ್ಯಾಂಕು 100 ಠೇವಣಿ ಸಂಗ್ರಹಣೆ ಗುರಿ ಹೊಂದಿದೆ. ಹಾಗೂ ತನ್ನ ಕಾರ್ಯವ್ಯಾಪ್ತಿಯನ್ನು ತುಮಕೂರು ಕೋಲಾರ, ಚಿಕ್ಕಬಳ್ಳಾಪುರಕ್ಕೆ ವಿಸ್ತರಿಸುವ ಚಿಂತನೆ ಹೊಂದಿದೆ. ಹಾಗೂ 2 ಶಾಖೆಗಳನ್ನು ತೆರೆಯುವ ಯೋಜನೆ ಹಾಕಿಕೊಂಡಿದೆ.

**ಬ್ಯಾಂಕಿನ ಸಾಮಾಜಿಕ ಚಟುಟವಟಿಕೆಗಳು:** ಬ್ಯಾಂಕು ಸಹಕಾರ ತತ್ವಗಳಲ್ಲಿ ಒಂದಾದ ಸಾಮಾಜಿಕ ಕಳಕಳಿಯ ಆಧಾರವಾಗಿ ಸದಸ್ಯರುಗಳಿಗೆ ಆರೋಗ್ಯ ತಪಾಸಣಾ ಶಿಬಿರಗಳು, ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ಪ್ರವಾಹ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ದೇಣಿಗೆ ನೀಡಿಕೆ, ಕೋವಿಡ್ ಸಂದರ್ಭದಲ್ಲಿ ದೇಣಿಗೆ ನೀಡಿಕೆ ಇನ್ನೂ ಹಲವಾರು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದೆ.

| ಬ್ಯಾಂಕಿನ ಪ್ರಗತಿಯ ಅಂಕಿ – ಅಂಶಗಳು (ದಿ. 31.3.2025ಕ್ಕೆ) (ರೂ. ಲಕ್ಷಗಳಲ್ಲಿ) | |
|---|---|
| ಸದಸ್ಯರ ಸಂಖ್ಯೆ | 8592 |
| ಷೇರು ಬಂಡವಾಳ | 294.00 |
| ಠೇವಣಿ | 8813.24 |
| ದುಡಿಯುವ ಬಂಡವಾಳ | 10429.65 |
| ಸಾಲ ಮತ್ತು ಮುಂಗಡಗಳು | 5800.11 |
| ಆಪದ್ಧನ ಮತ್ತು ಇತರೆ ನಿಧಿಗಳು | 928.68 |
| ನಿವ್ವಳ ಲಾಭ | 52.71 |
| ಲೆಕ್ಕ ಪರಿಶೋಧನಾ ವರ್ಗೀಕರಣ | "ಎ" |

## ಆಡಳಿತ ಮಂಡಳಿ ಸದಸ್ಯರು


ದೊಡ್ಡೀರಯ್ಯ ಸಿ.
ಅಧ್ಯಕ್ಷರು


ರುದ್ರಯ್ಯ ಕೆ.ಎಸ್.
ಉಪಾಧ್ಯಕ್ಷರು


ಸಿದ್ದರಾಜು ಎಸ್.
ನಿರ್ದೇಶಕರು


ಚಂದ್ರಶೇಖರಯ್ಯ
ನಿರ್ದೇಶಕರು


ಸಿದ್ದರಾಜು ಸಿ.
ನಿರ್ದೇಶಕರು


ನಂದಕುಮಾರ್ ಎಂ.ಸಿ.
ನಿರ್ದೇಶಕರು


ಪುಟ್ಟಮಾದಯ್ಯ ಬಿ.
ನಿರ್ದೇಶಕರು


ರಾಜ ಜೆ.
ನಿರ್ದೇಶಕರು


ರಾಚಯ್ಯ ಸಿ.
ನಿರ್ದೇಶಕರು


ಡಾ. ಪ್ರಶಾಂತ್ ಪಿ.
ನಿರ್ದೇಶಕರು


ಅರುಂದತಿ ಎಲ್.
ನಿರ್ದೇಶಕರು


ಕೇಶವ ರಾವ್
ನಿರ್ದೇಶಕರು


ಧನಂಜಯ್ಯ ಕೆ.ಎಚ್.
ನಿರ್ದೇಶಕರು


ಸಿ. ಮಹದೇವಯ್ಯ.
ವೃತ್ತಿಪರ ನಿರ್ದೇಶಕರು


ಜನಾರ್ಧನ ಕೆ.
ಮುಖ್ಯಕಾರ್ಯನಿರ್ವಹಣಾಧಿಕಾರಿ

# ದಿ ಜಮಖಂಡಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ ಲಿ., ಜಮಖಂಡಿ

ಕ್ರಿಸ್ತಶಕ 1940 ರಲ್ಲಿ ಶ್ರೀಯುತ ಅಪ್ಪಾರಾವ ಶಿಂಧೆ ಇವರು ಕರಾಚಿಯ ಕಾರ್ಪೋರೇಶನನಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ನಂತರ ಜಮಖಂಡಿ ಸಂಸ್ಥಾನಕ್ಕೆ ಆಗಮಿಸಿ, ಜಮಖಂಡಿಯಲ್ಲಿ ಆಳ ಅರಸ ಆಳ್ವಿಕೆಯಲ್ಲಿಯೂ ಆರ್ಥಿಕ ದೃಷ್ಟಿಯಿಂದ ಜನ ಸಾಮಾನ್ಯರು ಸ್ವಾವಲಂಭಿಗಳಾಗಬೇಕೆಂಬ ಸದುದ್ದೇಶದಿಂದ ಪ್ರೇರಿತರಾಗಿ ಸಹಕಾರಿ ತತ್ವವನ್ನು ಅನುಸರಿಸಿ ಅಂದಿನ ಜಮಖಂಡಿ ಘನ ಸಂಸ್ಥಾನಿಕರಾದ ಶ್ರೀಮಂತ ಶಂಕರರಾವ ಅಪ್ಪಾಸಾಹೇಬ ಪಟವರ್ಧನ ಇವರ ಉದಾರ ಆಶ್ರಯದಿಂದಲೂ ಸಾಂಗಲಿಯ ಧನಿ ಶ್ರೀ ವೇಳನಕರ ಮತ್ತು ಮುಂಬೈಯ ಲಾಹೋಟಿ ಇವರ ಧನಸಹಾಯದಿಂದ ಮುನ್ನಡೆಯುವಂತೆ ಮಾಡಲು "ದಿ ಜಮಖಂಡಿ ಸ್ಟೇಟ್ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕನ್ನು" ಪ್ರಾರಂಭಿಸಲು ಮುಂದಾದರು. ಬ್ಯಾಂಕು ಶೈಶವಾವಸ್ಥೆಯಲ್ಲಿ ಕೇವಲ 128 ಜನ ಸದಸ್ಯರ ರೂ.22025/- ಶೇರು ಬಂಡವಾಳದೊಂದಿಗೆ ಪ್ರಾರಂಭಿಸಲ್ಪಟ್ಟಿತು.

ಸನ್ 1948ರವರೆಗೆ ಈ ಸಂಸ್ಥಾನದಲ್ಲಿ ಇದ್ದ ಬ್ಯಾಂಕು ಇದೊಂದೆ. ಸ್ವಾತಂತ್ರ್ಯ ನಂತರ ಜಮಖಂಡಿ ಸಂಸ್ಥಾನವು ಮುಂಬಯಿ ಪ್ರಾಂತದಲ್ಲಿ ವಿಲೀನವಾಯಿತು. ಆಗ ಧಾರವಾಡ ಜಿಲ್ಲೆಗೆ ಸೇರಿಹೋದ ಕುಂದಗೋಳದಲ್ಲಿದ್ದ ಶಾಖೆಯನ್ನು ಸ್ಥಗಿತಗೊಳಿಸಲಾಯಿತು. ಸನ್ 1950 ರಲ್ಲಿ ಇದು ತನ್ನ ಹೆಸರನ್ನು "ದಿ ಜಮಖಂಡಿ ಅರ್ಬನ್ ಕೋ-ಆಪ್‌ರೇಟಿವ್ಹ ಬ್ಯಾಂಕು" ಎಂದು ಬದಲಾಯಿಸಿಕೊಂಡಿತು. ಸನ್ 1951 ರಲ್ಲಿ ರಜಿಸ್ಟ್ರಾರ್ ಆಫ್ ಕೋ-ಆಪ್ ಸೊಸೈಟಿ ಆಕ್ಟ್ ಪ್ರಕಾರ ಮುಂಬಯಿ ಪ್ರಾಂತದ ವಿಜಯಪುರದಲ್ಲಿ ನೋಂದಣಿಯಾಯಿತು. ನಂತರ ಕರ್ನಾಟಕ ಸ್ಟೇಟ್ ಕೋ-ಆಪ್‌ರೇಟಿವ್ ಸೋಸೈಟಿಸ್ ಆಕ್ಟ್ 1959 ರ ಪ್ರಕಾರ ಈ ಬ್ಯಾಂಕಿನ ನೋಂದಣಿಯಾಯಿತು. ನಮತರದಲ್ಲಿ ಸನ್ 1987 ರಿಂದ ರಿಝರ್ವ ಬ್ಯಾಂಕ್ ಆಫ್ ಇಂಡಿಯಾ ಇವರ ನಿಯಂತ್ರಣಕ್ಕೆ ಒಳಪಟ್ಟಿದೆ.

ಸನ್ 1942 ರಲ್ಲಿ ಬನಹಟ್ಟಿಯಲ್ಲಿ, 1980 ರಲ್ಲಿ ಗಲಗಲಿಯಲ್ಲಿ, 1990 ರಲ್ಲಿ ಗಿರೀಶನಗರ ಶಾಖೆ, 2010 ರಲ್ಲಿ ರಬಕವಿ ಶಾಖೆ, 2023 ರಲ್ಲಿ ಮುಧೋಳ, ಲೋಕಾಪೂರ, ಮಹಿಳಾ ಶಾಖೆ ಜಮಖಂಡಿ ಹಾಗೂ ತೊದಲಬಾಗಿ ಶಾಖೆ, 2024-2025 ರಲ್ಲಿ ಅಥಣಿ, ಮುನವಳ್ಳಿ, ವಿಜಯಪುರ, ಬಸವನ ಬಾಗೇವಾಡಿ, ಬಾಗಲಕೋಟ



ಮತ್ತು ಯಾದವಾಡಗಳಲ್ಲಿ ಶಾಖೆಗಳನ್ನು ಪ್ರಾರಂಭಿಸಿದೆ.

- ಶ್ರೀ. ಅಪ್ಪಾರಾವ ಶಿಂಧೆ ಇವರು ದಿನಾಂಕ 15/09/1940 ರಿಂದ 20/10/1945 ರವರೆಗೆ ಬ್ಯಾಂಕಿನ ಪ್ರಥಮ ವ್ಯವಸ್ಥಾಪಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದರು.
- ಸನ್ಮಾನ್ಯಶ್ರೀ ಬಿ. ಡಿ. ಜತ್ತಿ ಇವರು ದಿನಾಂಕ 19/11/1943 ರಿಂದ 23/12/1943 ರವರೆಗೆ ವ್ಯವಸ್ಥಾಪಕ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದರು. ಸನ್ಮಾನ್ಯರು ನಮ್ಮ ರಾಜ್ಯ ಮುಖ್ಯಮಂತ್ರಿಗಳು ಹಾಗೂ ಮಹಾರಾಷ್ಟ್ರದ ರಾಜ್ಯಪಾಲರಾಗಿ ಮತ್ತು ಭಾರತದ ಉಪರಾಷ್ಟ್ರಪತಿಗಳಾಗಿ ಬ್ಯಾಂಕಿನ ಘನತೆಯನ್ನು ರಾಷ್ಟ್ರಮಟ್ಟಕ್ಕೆ ಕೊಂಡೊಯ್ದು ಜಮಖಂಡಿಯ ಹೆಸರನ್ನು ದೇಶದಲ್ಲಿ ಅಚ್ಚಳಿಯದೇ ಉಳಿಯುವಂತೆ ಮಾಡಿದ ಘನತೆವೆತ್ತರು.
- ಸನ್ಮಾನ್ಯ ಶ್ರೀ ಶ್ರೀಶೈಲಪ್ಪ ಎಮ್. ಅಥಣಿ ಇವರು ಸನ್ 1945 ರಿಂದ 1950ರವರೆಗೆ ವ್ಯವಸ್ಥಾಪಕ ನಿರ್ದೇಶಕರಾಗಿ ಹಾಗೂ ಸನ್ 1951 ರಿಂದ 1966ರವರೆಗೆ ಬ್ಯಾಂಕಿನ ಚೇರಮನರಾಗಿ ಕಾರ್ಯನಿರ್ವಹಿಸಿದರು. ಸನ್ಮಾನ್ಯರು ಕರ್ನಾಟಕ ರಾಜ್ಯದಲ್ಲಿ ಜಮಖಂಡಿ ಮತಕ್ಷೇತ್ರದಿಂದ ಶಾಸಕರಾಗಿಯೂ ಕೂಡಾ ಸೇವೆ ಸಲ್ಲಿಸಿದ್ದಾರೆ.
- ಸನ್ಮಾನ್ಯ ಶ್ರೀ ಪಿ. ಎಮ್. ಬಾಂಗಿ ಇವರು ಸನ್ 1967 ರಿಂದ 1970 ರವರೆಗೆ ಬ್ಯಾಂಕಿನ ಚೇರಮನರಾಗಿ ಕಾರ್ಯನಿರ್ವಹಿಸಿದರು. ಸನ್ಮಾನ್ಯರು ಜಮಖಂಡಿ ಮತಕ್ಷೇತ್ರದ ಶಾಸಕರಾಗಿಯೂ ಕೂಡಾ ಸೇವೆ ಸಲ್ಲಿಸಿದ್ದಾರೆ.

- ಸನ್ಮಾನ್ಯಶ್ರೀ ಆರ್. ಎಮ್. ಕಲೂತಿ ಇವರು ಸನ್ 1976 ರಿಂದ 1980 ರವರೆಗೆ ಚೇರಮನರಾಗಿ ಕಾರ್ಯನಿರ್ವಹಿಸಿರುವರು. ಸನ್ಮಾನ್ಯರು ಮೂರು ಬಾರಿ ಶಾಸಕರಾಗಿ ಸೇವೆ ಸಲ್ಲಿಸಿರುತ್ತಾರೆ.
